ಮೇ 2019
ಸಂಪುಟ 15
ಸಂಚಿಕೆ 05

# ಸ್ನೇಹ ಚಿಂತನೆ

ಮಾಸ ಪತ್ರಿಕೆ

www.buntsanghablr.com

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
(A Charitable Institution)

## ಬಿಸು (ಯುಗಾದಿ) ಸಡಗರ








## ದ್ವೀತಿಯ ಪಿಯುಸಿ ಸಾಧಕರಿಗೆ ಅಭಿನಂದನೆಗಳು



ಸಿ. ವೈ. ಚಂದನಾ ರಾಜ್ ಗೌಡ
589/600 (98.16%)
6ನೇ ರ್‍ಯಾಂಕ್
ವಿಜ್ಞಾನ ವಿಭಾಗ




ಮೇಘನಾ ಸಿ.
591/600 (98.50%)
6ನೇ ರ್‍ಯಾಂಕ್
ವಾಣಿಜ್ಯ ವಿಭಾಗ

ಬಿ.ಎಸ್.ಆರ್.ಎನ್.ಎಸ್.
ವಿದ್ಯಾನಿಕೇತನ
10ನೇ ತರಗತಿ(ICSE)
100% ಫಲಿತಾಂಶ

ಸಂಚಿಕೆ ಬೆಲೆ
ರೂ 1/-

324, Chord Road, Vijayanagara, Bengaluru - 560 040.
Ph: 080 2339 9323, 2339 9635, E: info@buntsanghablr.com


SEASONS GREETINGS
from
Swathi
Your Happiness is our Priority
We ensure to meet the needs of our guests by providing excellent facilities. Being the best business hotel in Bengaluru, Attide hotels blends comfort and luxury to give an unparalleled experience which makes our guests visit us again in there next trip.
Attide Boutique Hotel
Swathi Group of Restaurants
Swathi Caterers

ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 15** **MAY 2019** **ISSUE 05**



**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ :
**ಶ್ರೀ ಮುರಲೀಧರ ಹೆಗ್ಡೆ**

ಗೌ|| ಸಂಪಾದಕರು :
**ಶ್ರೀಮತಿ ರಾಜಶ್ರೀ ಕೆ. ಶೆಟ್ಟಿ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀ ಸುಧಾಕರ ಶೆಟ್ಟಿ, ಅಚ್ಲಾಡಿ**
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಶ್ರೀ ಸತೀಶ್ ಶೆಟ್ಟಿ, ವಕ್ವಾಡಿ**
**ಕುಮಾರಿ ಶಾಲ್ಮಲೀ ಸುರೇಶ್**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**



ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕಿ**


## ಒಳ ಪುಟಗಳಲ್ಲಿ...


| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 & 5 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಬಿಸು ಸಡಗರ | 5 |
| 5. | ಸಹಾಯದೊಳಗಿನ ಮಾಯ | 8 |
| 6. | ಬ್ಯಾಂಕುಗಳ ವಿಲೀನ ಪ್ರಕ್ರಿಯೆ ಜನಸಾಮಾನ್ಯರ ಹಿತಾಸಕ್ತಿ ಕಾಪಾಡಬಲ್ಲುದೇ? | 9 |
| 7. | Plan for Century | 11 |
| 8. | ಒಂಟಿ ಮನೆ | 13 |
| 9. | ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು | 15 |
| 10. | ಅಸ್ತಂಗತರಾದ ಬಯಲಾಟ ರಂಗದ ಅಸಾಮಾನ್ಯ ಹಾಸ್ಯಗಾರ | 25 |
| 11. | ವಿಶ್ವ ವಿಜ್ಞಾನಕ್ಕೆ ಭಾರತದ ಕೊಡುಗೆ | 28 |


**ಮುಖಪುಟ**

**ಬಿಸು ಸಡಗರ**
**ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಪಿ.ಯು.ಸಿ. ಹಾಗೂ ಹತ್ತನೇ ತರಗತಿ ಫಲಿತಾಂಶ**

# ಸಂಪಾದಕೀಯ



## “ಫಿಂಗರ್ ಬೌಲ್”

ಇಂದಿನ ದಿನಗಳಲ್ಲಿ ಬಹುಶಃ ಇದೊಂದು ಅತ್ಯಂತ ಚಿರಪರಿಚಿತ ಶಬ್ದ. ಊಟಕ್ಕೆ ಚಮಚ, ಫೋರ್ಕ್‌ಗಳನ್ನು ಬಳಸುವ ಸಂಸ್ಕೃತಿಯಿರುವಂತಹ ಪಾಶ್ಚಾತ್ಯ ದೇಶಗಳಲ್ಲಿ ಕೈಗಳನ್ನು ಬಳಸಲೇಬೇಕಾದಂತಹ ಆಹಾರ ಪದಾರ್ಥಗಳನ್ನು (ಉದಾ: ಮಾಂಸ, ಏಡಿ, ಮೀನು ಇತ್ಯಾದಿ) ಅಥವಾ ಕೈಗೆ ಬಣ್ಣ ಅಂಟಿಕೊಳ್ಳುವಂತಹ ಹಣ್ಣುಗಳನ್ನು (ಬೆರ್ರಿ) ತಿಂದ ಮೇಲೆ ಬೆರಳುಗಳನ್ನು ಮಾತ್ರ ನೀರಿಗೆ ಅದ್ದಿ ಜೊತೆಯಲ್ಲಿ ನೀಡಿದ ಟವಲ್‌ನಿಂದ ಒರೆಸಿಕೊಂಡು ಊಟವನ್ನು ಮುಂದುವರಿಸುವ ಪದ್ಧತಿ. ಉಗುರು ಬೆಚ್ಚಗಿನ ನೀರಿನ ಬೋಗುಣಿಯಲ್ಲಿ ನಿಂಬೆ ತುಣುಕುಗಳು, ಪುದಿನ ಎಲೆ ಅಥವಾ ಗುಲಾಬಿಯ ಎಸಳುಗಳನ್ನು ಬಳಸುವುದು ಸಂಪ್ರದಾಯ. ಹಿಂದೆ ನಮ್ಮ ದೇಶದಲ್ಲಿ ಸ್ಟಾರ್ ಹೋಟೆಲ್‌ಗಳಲ್ಲಿ ಮಾತ್ರ ಬಳಸಲ್ಪಡುತ್ತಿದ್ದ ಈ ಪದ್ಧತಿ ಇಂದು ಸಾಮಾನ್ಯ ಹೋಟೆಲ್‌ಗಳಲ್ಲೂ ಇದ್ದು ಗ್ರಾಹಕರಿಗೆ ಲಕ್ಷುರಿಯ ಅನುಭವ ನೀಡುತ್ತದೆ. ಭರಪೂರ ಮಸಾಲೆ ಹಾಗೂ ಎಣ್ಣೆಗಳನ್ನು ಬಳಸಿದ ಆಹಾರಗಳನ್ನು ತಿನ್ನುವ, ಸ್ಪೂನ್–ಫೋರ್ಕ್‌ಗಳು ಕೈಗಳಷ್ಟು ತೃಪ್ತಿ ನೀಡದ ನಮ್ಮ ಆಹಾರ ಪದ್ಧತಿಗೆ ಅದು ಒಗ್ಗುವಂತಹದ್ದಲ್ಲ. ಬೌಲ್ ಬಂದ ಕೂಡಲೇ ನಿಂಬೆ ಹಣ್ಣನ್ನು ಹಿಸುಕಿ, ಇಡೀ ಕೈಯನ್ನು ಅದ್ದಿ ಹಕ್ಕಿ ಸ್ನಾನ ಮಾಡುವಂತೆ ಮಾಡುವ ನಮಗೆ ಕೊಳಾಯಿಯ ನೀರಿನಲ್ಲಿ ಕೈಯೊಂದಿಗೆ ಬಾಯಿ ತೊಳೆಯುವುದೇ ಸೂಕ್ತ ಮತ್ತು ಆರೋಗ್ಯಕರ. ಅದೇನೇ ಇರಲಿ, ಆಕ್ಷೇಪವಿರುವುದು ಅಲ್ಲಿ ಬಳಸುವ ನಿಂಬೆಹಣ್ಣಿನ ಬಗ್ಗೆ ಮಾತ್ರ.

ಆಹಾರ ಪದಾರ್ಥಗಳಲ್ಲಿ ಕೃತಕ Lemon Essence ಬಳಸುವ ನಾವು ಫಿಂಗರ್ ಬೌಲ್‌ಗೆ ಪೌಷ್ಟಿಕತೆ, ಔಷಧೀಯ ಗುಣಗಳ ಆಗರವಾದ ನಿಂಬೆಹಣ್ಣನ್ನು ಬಳಸುತ್ತಿರುವುದು ವಿಪರ್ಯಾಸ! ನಿಂಬೆ ಹಣ್ಣಿನಲ್ಲಿರುವ ಪೊಟ್ಯಾಶಿಯಂ, ಸಿಟ್ರಿಕ್ ಆ್ಯಸಿಡ್, ವಿಟಮಿನ್ ಸಿ ಮತ್ತು  ಆ್ಯಂಟಿ ಓಕ್ಸಿಡೆಂಟ್‌ಗಳು ಹೃದಯದ ಮತ್ತು ಕಿಡ್ನಿಯ ಆರೋಗ್ಯವನ್ನು ಕಾಪಾಡುವಲ್ಲಿ, ರಕ್ತಹೀನತೆಯನ್ನು ನಿವಾರಿಸುವಲ್ಲಿ ಮತ್ತು ಕ್ಯಾನ್ಸರನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ನಿಂಬೆ0ು ತಿರುಳಿನಲ್ಲಿರುವ ಪೆಕ್ಟಿನ್‌ಗಳು ಕರುಳಿನಲ್ಲಿ ಉಪಕಾರಿ ಬ್ಯಾಕ್ಟೀರಿಯಾಗಳನ್ನು ಬೆಳೆಸುವಲ್ಲಿ ಸಹಕರಿಸಿದರೆ ನಿಂಬೆ ಸಿಪ್ಪೆಯಲ್ಲಿರುವ ವಿಟಮಿನ್ ಮತ್ತು ಫೈಬರ್‌ಗಳು ಆರೋಗ್ಯಕ್ಕೆ ಮತ್ತು ಸೌಂದರ್ಯವರ್ಧನೆಯಲ್ಲಿ ಬಹಳಷ್ಟು ಉಪಕಾರಿ. ಇಂತಹ ಪೌಷ್ಟಿಕ ನಿಂಬೆಹಣ್ಣನ್ನು ಬಳಸದೇ ಬಿಸಾಡುವಂತಹ ಈ ಫಿಂಗರ್ ಬೌಲ್ ಎಲ್ಲಾ ವಿಧದ, ಆಹಾರ ಪದಾರ್ಥಗಳನ್ನು ವ್ಯರ್ಥ ಮಾಡುವಂತಹ ನಮ್ಮ ಬೇಜಾವಾಬ್ದಾರಿತನಕ್ಕೆ ರೂಪಕದಂತೆ ಗೋಚರಿಸುತ್ತದೆ. ಹೋಟೆಲ್‌ಗಳಿಗೆ ಹೋದಾಗ ಬಹುವಾಗಿ ಕಾಡಿ, ನಾವು ಆಹಾರಕ್ಕೆ ಆರ್ಡರ್ ಕೊಡುವಾಗಲೇ ನಿರಾಕರಿಸುತ್ತಿದ್ದ ಈ ಹಕ್ಕಿ ಸ್ನಾನದ ಬೋಗುಣಿಗಳು ಇತ್ತೀಚೆಗೆ ಸ್ನೇಹಿತರ ಮನೆಯ ಸಮಾರಂಭವೊಂದರಲ್ಲಿ ಅವತರಿಸಿ ಶಾಕ್ ನೀಡಿತು!

ಹಸಿರು ಕ್ರಾಂತಿಯ ಪರಿಣಾಮವಾಗಿ ಶಾಸ್ತ್ರೀಯ ಕೃಷಿ ಪದ್ಧತಿಯು ಹೆಚ್ಚು ಕಡಿಮೆ ನಾಶವಾಗಿ ಹೈಬ್ರಿಡ್ ತಳಿಗಳು, ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳ ವ್ಯಾಪಕ ಬಳಕೆಯಿಂದ ಉತ್ಪಾದನೆ ಹೆಚ್ಚಾದರೂ, ಗುಣಮಟ್ಟ ಅಪಾಯಕಾರಿ ಮಟ್ಟಕ್ಕೆ ಕುಸಿಯಿತು. ಜನಸಂಖ್ಯೆ ಏರುತ್ತಲೇ ಇರುವ ಈ ಕಾಲ ಘಟ್ಟದಲ್ಲಿ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದ ಹಿನ್ನೆಲೆಯಲ್ಲಿ ರೈತರು ಕೃಷಿಯಿಂದ ವಿಮುಖರಾಗಿ ಉತ್ಪಾದನೆ ಕುಸಿದು, ಬೆಲೆ  ಏರಿಕೆ ಹಾಗೂ ಆಹಾರ ಪದಾರ್ಥಗಳ ಕೊರತೆ ಜನಜೀವನವನ್ನು ವಿಪರೀತವಾಗಿ ತಟ್ಟಿದೆ. ಇಂತಹ ಪರಿಸ್ಥಿತಿಯಲ್ಲಿ ಆಹಾರ ಪದಾರ್ಥಗಳನ್ನು ಸ್ವಲ್ಪವೂ ವ್ಯರ್ಥ ಮಾಡದೆ ಬಳಸುವಂತಹ ಗುರುತರವಾದ ಜವಾಬ್ದಾರಿ ಪ್ರತಿಯೊಬ್ಬ ಪ್ರಜೆಯ ಮೇಲಿದೆ. ಹೋಟೆಲ್‌ಗಳಲ್ಲಿ ಫಿಂಗರ್ ಬೌಲ್‌ಗಳಲ್ಲಿ ಹೂವಿನ ಎಸಳುಗಳನ್ನು ಬಳಸುವುದು ನಿಂಬೆ ಹಣ್ಣಿಗೆ ಅತ್ಯಂತ ಸೂಕ್ತ ಪರ್ಯಾಯವಾಗಬಹುದು. ಒಂದೆಡೆ ಆಹಾರಕ್ಕಾಗಿ ಪರದಾಡುತ್ತಿರುವ ಜೀವಿಗಳಿರುವಾಗ ಎಲ್ಲೂ ಆಹಾರ ಪದಾರ್ಥಗಳನ್ನು ಮಾಡದೇ ರೈತನ ಶ್ರಮವನ್ನು ಗೌರವಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ.

**ಶ್ರೀಮತಿ ರಾಜಶ್ರೀ ಕೆ. ಶೆಟ್ಟಿ**

# ಅಧ್ಯಕ್ಷರ ಮಾತು



**ಆತ್ಮೀಯ ಸದಸ್ಯರೇ,**

ಇತ್ತೀಚೆಗೆ ಸಂಘದ ಸಂಕೀರ್ಣದಲ್ಲಿ ಆಯೋಜಿಸಿದ್ದ ಬಿಸು (ಯುಗಾದಿ) ಸಡಗರ ಹಲವು ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಬಹಳ ಯಶಸ್ವಿಯಾಗಿ ಮೂಡಿಬಂತು. ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರ ನೇತೃತ್ವದಲ್ಲಿ ಆಯೋಜಿಸಿದ್ದ ಅಂತರ್ ಬಂಟರ ಸಂಘ ಸಾಂಸ್ಕೃತಿಕ ಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಂಬೈಯ ಉದ್ಯಮಿ ಶ್ರೀ ಆನಂದ ಶೆಟ್ಟಿ ಹಾಗೂ ಶಶಿರೇಖಾ ಆನಂದ ಶೆಟ್ಟಿ ದಂಪತಿಗಳು ಹಾಗೂ ಮಾತೃ ಸಂಘದ ಅಧ್ಯಕ್ಷರಾದ ಶ್ರೀ ಅಜಿತ್ ರೈ ಮಾಲಾಡಿ ಭಾಗವಹಿಸಿದ್ದರು. ಸುಮಾರು 7 ಬಂಟರ ಸಂಘಗಳಿಂದ ಸಾಂಸ್ಕೃತಿಕ ತಂಡಗಳು ಭಾಗವಹಿಸಿ ಕರಾವಳಿಯ ಸಂಸ್ಕೃತಿಯ ಸೊಗಡನ್ನು ಸಂಘದ ಸಭಾಭವನದಲ್ಲಿ ಅನಾವರಣಗೊಳಿಸಿದರು.

ಸಂಜೆ ನಡೆದ ಸಭಾ ಕಾರ್ಯಕ್ರಮದಲ್ಲಿ 'ದಿವಂಗತ ಮುಲ್ಕಿ ಸುಂದರ ರಾಮ್ ಶೆಟ್ಟಿ' ಪ್ರಶಸ್ತಿಯನ್ನು ಪ್ರಪ್ರಥಮ ಬಾರಿಗೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿ.ಇ.ಓ. ಶ್ರೀ ಜಿ. ರಾಜ್‌ಕಿರಣ್ ರೈಯವರಿಗೆ ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಜಿ. ರಾಜ್‌ಕಿರಣ್ ರೈಯವರು ಬಂಟರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಲಾಂಛನವನ್ನು ಅನಾವರಣಗೊಳಿಸಿದರು. ಎಫ್.ಕೆ.ಸಿ.ಸಿ.ಐ. ನ ಅಧ್ಯಕ್ಷರಾದ ಶ್ರೀ ಸುಧಾಕರ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ಖ್ಯಾತ ಹೃದ್ರೋಗ ತಜ್ಞ ಶ್ರೀ ಕೆ. ರವಿಶಂಕರ್ ಶೆಟ್ಟಿಯವರನ್ನು ಸನ್ಮಾನಿಸಲಾಯಿತು.

**ವೈದ್ಯಕೀಯ ವಿಭಾಗದಿಂದ ವಿನೂತನ ಸೇವಾ ಕಾರ್ಯಗಳಿಗೆ ಚಾಲನೆ:**

ಸಂಘದ ವೈದ್ಯಕೀಯ ವಿಭಾಗದ ಚೇರ್‌ಪರ್ಸನ್ ಡಾ. ನಿಶಾಕಾಂತ್ ಶೆಟ್ಟಿಯವರ ನೇತೃತ್ವದಲ್ಲಿ ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಕಾರ್ಯೋನ್ಮುಖವಾಗಿದೆ.

**ಹೋಂ ನರ್ಸಿಂಗ್ ತರಬೇತಿ:** ಬಂಟ ಸಮುದಾಯ ಹಾಗೂ ಇತರ ಸಮುದಾಯದ ಆಸಕ್ತ ಯುವಕ-ಯುವತಿಯರಿಗೆ ಉಚಿತ ಹೋಂ ನರ್ಸಿಂಗ್ (ಆರೋಗ್ಯ ಶುಶ್ರೂಷೆ) ತರಬೇತಿ ನೀಡುವ ನೂತನ ಯೋಜನೆಗೆ ವೈದ್ಯಕೀಯ ವಿಭಾಗ ಮುಂದಾಗಿದೆ. ತರಬೇತಿಯ ನಂತರ ಈ ಆರೋಗ್ಯ ಶುಶ್ರೂಸಕರನ್ನು ಸದಸ್ಯರು ಇಚ್ಛಿಸಿದಲ್ಲಿ ತಮ್ಮ ಕುಟುಂಬದ ಹಿರಿಯ ನಾಗರಿಕರ/ ರೋಗಿಗಳ ಸೇವೆಗಾಗಿ ನೇಮಕ ಮಾಡಿಕೊಳ್ಳಬಹುದಾಗಿದೆ.

**ನೂತನ ವಿದ್ಯಾರ್ಥಿವೇತನ ಯೋಜನೆ – 'ವಿದ್ಯಾ ದೀವಿಗೆ' :**

ಬೆಂಗಳೂರಿನಲ್ಲಿ ನೆಲೆಸಿರುವ ಸಮುದಾಯದ ಆರ್ಥಿಕವಾಗಿ ಹಿಂದುಳಿದ (ಬಡತನ ರೇಖೆಗಿಂತ ಕೆಳಗಿರುವ) ಕುಟುಂಬದ ವಿದ್ಯಾರ್ಥಿಗಳ ನೆರವಿಗಾಗಿ ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಮೆನ್ ಶ್ರೀ ಪ್ರವೀಣ್‌ಚಂದ್ರ ಶೆಟ್ಟಿಯವರ ನೇತೃತ್ವದಲ್ಲಿ 'ವಿದ್ಯಾ ದೀವಿಗೆ' ಎನ್ನುವ ನೂತನ ವಿದ್ಯಾರ್ಥಿವೇತನ ಯೋಜನೆಯನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯನ್ವಯ ಗರಿಷ್ಠ ರೂ.30,000/- ವಾರ್ಷಿಕ ಶಾಲಾ ಶುಲ್ಕವಿರುವ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಶಾಲಾ ಶುಲ್ಕದ 50 % ವೆಚ್ಚವನ್ನು ಸಂಘವು ಭರಿಸಲಿದೆ. ಅರ್ಹ ಅಭ್ಯರ್ಥಿಗಳು ಸೂಕ್ತ ದಾಖಲೆಗಳೊಂದಿಗೆ (ಬಿಪಿಎಲ್/ ಅಂತ್ಯೋದಯ ಕಾರ್ಡ್, ವಿಳಾಸ ಧೃಢೀಕರಣ, ಫೀ ರಸೀದಿ ಇತ್ಯಾದಿ) ಸಂಘದ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

10ನೇ ತರಗತಿ, ಪಿಯುಸಿ ಮೊದಲಾದ ಪರೀಕ್ಷೆಗಳ ಫಲಿತಾಂಶಗಳು ಪ್ರಕಟಗೊಂಡಿದ್ದು, ನಮ್ಮ ಸಂಸ್ಥೆಯ ವಿದ್ಯಾರ್ಥಿಗಳು ವಿಶೇಷ ಸಾಧನೆಗೈದಿರುತ್ತಾರೆ. ನಮ್ಮ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಕುಮಾರಿ ಮೇಘನಾ ಸಿ. 98.50% ಅಂಕಗಳೊಂದಿಗೆ 6 ನೇ ರ್‍ಯಾಂಕ್ ಹಾಗೂ ವಿಜ್ಞಾನ ವಿಭಾಗದ ಕುಮಾರಿ ಸಿ. ವೈ. ಚಂದನಾ ರಾಜ್ ಗೌಡ 98.16% ಅಂಕಗಳೊಂದಿಗೆ 6 ನೇ ರ್‍ಯಾಂಕ್ ಪಡೆದು ನಮ್ಮೆಲ್ಲರ ಹೆಮ್ಮೆಗೆ ಪಾತ್ರರಾಗಿರುತ್ತಾರೆ.

ಈ 10 ನೇ ತರಗತಿ (ಐ.ಸಿ.ಎಸ್.ಇ.) ವಾರ್ಷಿಕ ಪರೀಕ್ಷೆಯಲ್ಲಿ 100% ಫಲಿತಾಂಶ ಬಂದಿರುವುದು ನಮಗೆಲ್ಲರಿಗೂ ಹೆಮ್ಮೆಯನ್ನು ತಂದಿದೆ. ಕುಮಾರಿ ಅಮೂಲ್ಯ 97.80% ಅಂಕ ಪಡೆದು ಶಾಲೆಯಲ್ಲಿ ಅಗ್ರಸ್ಥಾನ ಪಡೆದಿರುತ್ತಾರೆ. ಒಟ್ಟು 48 ವಿದ್ಯಾರ್ಥಿಗಳು, ವಿವಿಧ ವಿಷಯಗಳಲ್ಲಿ 100% ಅಂಕಗಳನ್ನು (Centum scores) ಪಡೆದಿರುತ್ತಾರೆ.

ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳನ್ನು, ಪ್ರೋತ್ಸಾಹಿಸಿದ ಪೋಷಕರನ್ನು, ಮಾರ್ಗದರ್ಶನ ನೀಡಿದ ಪ್ರಾಂಶುಪಾಲರು ಹಾಗೂ ಎಲ್ಲಾ ಶಿಕ್ಷಕರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತಿದ್ದೇನೆ.

ಯಲಚಗುಪ್ಪೆಯಲ್ಲಿ ಆರಂಭಿಸುತ್ತಿರುವ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ಕಟ್ಟಡದ ಕಾಮಗಾರಿ ತ್ವರಿತಗತಿಯಲ್ಲಿ ನಡೆಯುತ್ತಿದ್ದು, 2020 ನೇ ಶೈಕ್ಷಣಿಕ ವರ್ಷದಿಂದ ಪಿಯುಸಿ ತರಗತಿಗಳನ್ನು ಹೊಸ ಸಂಕೀರ್ಣಕ್ಕೆ ಸ್ಥಳಾಂತರಿಸಲು ಉದ್ದೇಶಿಸಲಾಗಿದೆ.

**ವಂದನೆಗಳೊಂದಿಗೆ,**

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



**"ವಿದ್ಯಾ ದದಾತಿ ವಿನಯಂ, ವಿನಯಂ ದದಾತಿ ಪಾತ್ರತಂ"**

ಎರಡಕ್ಷರದ ವಿದ್ಯೆಯಿಂದ ವಿನಯ, ಕೀರ್ತಿ, ಸಂಪತ್ತು, ದಾನ, ಧರ್ಮ ಹೀಗೆ ಹತ್ತಾರು ಗುಣಗಳು ನಮ್ಮನ್ನು ಆಕರ್ಷಿಸಿಕೊಳ್ಳುತ್ತವೆ. ಪರೀಕ್ಷೆಯನ್ನು ಬರೆದ ಮಕ್ಕಳಲ್ಲಿ ಭಯ ಹಾಗೂ ಪೋಷಕರಲ್ಲಿ ಆತಂಕದ ಛಾಯೆ ಮೂಡುವುದು ಸಹಜ. ಆದರೆ ಈಗ ಎಲ್ಲಾ ಫಲಿತಾಂಶಗಳೂ ಹೊರ ಬಿದ್ದಿವೆ. ಪೋಷಕರು ಹಾಗೂ ವಿದ್ಯಾರ್ಥಿಗಳು ಒಳ್ಳೆ ಗುಣ ಮಟ್ಟದ ಶೈಕ್ಷಣಿಕ ಸಂಸ್ಥೆಯ ಹುಡುಕಾಟದಲ್ಲಿದ್ದಾರೆ. ಪ್ರತಿಷ್ಠಿತ ಶಾಲಾ ಕಾಲೇಜುಗಳು ತಮ್ಮ ವಿದ್ಯಾ ಮಾಪನವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಗರಿಷ್ಠ ಅಂಕವನ್ನು ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶವನ್ನು ನೀಡುತ್ತಿವೆ.

ಸಂತೋಷದ ವಿಷಯವೆಂದರೆ ನಮ್ಮೆಲ್ಲರ ಹೆಮ್ಮೆಯ ಶಾಲೆಯಾದ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನವು ದ್ವಿತೀಯ ಪಿ.ಯು ವಿಭಾಗದ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ತಲಾ 6ನೇ ರ್‍ಯಾಂಕನ್ನು ಮುಡಿಗೇರಿಸಿಕೊಂಡದ್ದು ಸಂತಸದ ವಿಚಾರ. ಹಾಗೆಯೇ ಐ.ಸಿ.ಎಸ್.ಇ ಯಲ್ಲಿ ನೂರಕ್ಕೆ ನೂರು ಫಲಿತಾಂಶ ನಮಗೆ ಸಿಕ್ಕಿದ್ದು ಸುಮಾರು 57ಕ್ಕೂ ಹೆಚ್ಚು ಮಕ್ಕಳು ಶೇಕಡಾ 90ಕ್ಕಿಂತಲೂ ಹೆಚ್ಚು ಅಂಕಗಳನ್ನು ಗಳಿಸಿರುವುದು ನಮ್ಮ ಶಾಲೆಗೆ ಗೌರವ.

ಈ ಎಲ್ಲಾ ಯಶಸ್ಸು ಹಾಗೂ ಕೀರ್ತಿಗಳ ಹಿಂದೆ ಶಿಕ್ಷಕರ, ಪೋಷಕರ, ವಿದ್ಯಾರ್ಥಿಗಳ ಶ್ರಮ, ಪ್ರ0ಯತ್ನ, ಸಾಧನೆ ಅಪಾರವಾದದ್ದು. ಅವರೆಲ್ಲರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತಾ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇನ್ನಷ್ಟು ಸಾಧನೆಗಳು ನಮ್ಮದಾಗಲಿ ಎಂದು ಆಶಿಸೋಣ. ಪಿ.ಯು ಪ್ರವೇಶಾತಿಗೆ ಬಹಳಷ್ಟು ಬೇಡಿಕೆ ಹೆಚ್ಚಿದ್ದು ಉತ್ತಮ, ಪ್ರತಿಭಾವಂತ ವಿದ್ಯಾರ್ಥಿಗಳ ಪ್ರವೇಶಕ್ಕಾಗಿ, ಆಯ್ಕೆಗಾಗಿ ಉತ್ತಮ ಮಾನದಂಡವನ್ನು ರಚಿಸಿಕೊಂಡಿದ್ದೇವೆ.

ಬಿಸು ಸಡಗರ

ಈ ವರ್ಷ ಬಿಸು ಆಚರಣೆ ಸಂಘದಲ್ಲಿ ಬಹಳ ವಿಶೇಷವಾಗಿ ನಡೆಯಿತು. ಅಂತರ್ ಬಂಟರ ಸಂಘದ ಸಾಂಸ್ಕೃತಿಕ ಸ್ಪರ್ಧೆ ಬಹಳ ಸುಂದರವಾಗಿ ಮೂಡಿ ಬಂತು. ನಾನಾ ಸಂಘಗಳಿಂದ ಸುಮಾರು 450 ಕ್ಕೂ ಹೆಚ್ಚು ಕಲಾವಿದರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದು ವಿಶೇಷವಾಗಿತ್ತು. ಹಾಗೆಯೇ ದಾಂಪತ್ಯ ಜೀವನದಲ್ಲಿ 50 ಸಂವತ್ಸರಗಳನ್ನು ಕಂಡ ಹಲವು ಜೋಡಿಗಳನ್ನು ಗೌರವಿಸಿದ್ದು, ಕಾಣುಗರ ಕಣ್ಣಿನಲ್ಲಿ ಹರ್ಷ ಮೂಡಿತು. ಸಂಘದ ಆವರಣದಲ್ಲಿ ನಿರಂತರವಾಗಿ ಕಾರ್ಯಕ್ರಮಗಳನ್ನು ನಡೆಯಲಿದ್ದು, ಸಂಘದ ಸದಸ್ಯರ ಸಂಖ್ಯೆಯೂ ಹೆಚ್ಚುತ್ತಿರುವುದು ಸಂಘದ ಅಭಿವೃದ್ಧಿಯ ಸಂಕೇತ.

ಪ್ರತಿ ಕಾರ್ಯಕ್ರಮಕ್ಕೂ ಸಂಘದ ಸದಸ್ಯರ ಭಾಗವಹಿಸುವಿಕೆ ಅಪಾರ ಸಂಖ್ಯೆಯಲ್ಲಿ ಕಾಣುತ್ತಿರುವುದು ಸಂತೋಷದ ಗುರುತು. ಸಂಘವನ್ನು ಇನ್ನಷ್ಟು ಎತ್ತರಕ್ಕೆ ಬೆಳೆಸುವ ನಿಟ್ಟಿನಲ್ಲಿ ನಾವು ನೀವೆಲ್ಲಾ ಜೊತೆಯಾಗೋಣ ಎಂದು ಆಶಿಸುತ್ತಾ,

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಬಿಸು ಸಡಗರ



ದಿನಾಂಕ 14.04.2019ರ ಭಾನುವಾರದಂದು ಸೌರಮಾನ ಯುಗಾದಿ ಹಬ್ಬವನ್ನು (ಬಿಸು ಸಡಗರ) ಬಂಟರ ಸಂಘ ಬೆಂಗಳೂರಿನಲ್ಲಿ ಅತ್ಯಂತ ವಿಜ್ರಂಭಣೆಯಿಂದ ಆಚರಿಸಲಾಯಿತು. ಬೆಳಿಗ್ಗೆ 10.30ಕ್ಕೆ ಉದಯ ಜಾದೂಗಾರ್ ಇವರಿಂದ ನಡೆದ ಜಾದು ಪ್ರದರ್ಶನ ನೆರೆದವರ ಕಣ್ಮನವನ್ನು ಸೆಳೆಯಿತು.

ನಂತರ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ಆನಂದ ಶೆಟ್ಟಿ ಮತ್ತು ಶ್ರೀಮತಿ ಶಶಿರೇಖಾ ಆನಂದ ಶೆಟ್ಟಿ, ಮ್ಯಾನೇಜಿಂಗ್ ಡೈರೆಕ್ಟರ್, ಅರ್ಗಾನಿಕ್ ಇಂಡಸ್ಟ್ರೀಸ್ ಪ್ರೈ. ಲಿ. ಮುಂಬೈ ಹಾಗೂ ಬಂಟರ ಯಾನೆ ನಾಡವರ ಮಾತೃ ಸಂಘ ಮಂಗಳೂರಿನ ಅಧ್ಯಕ್ಷರಾದ ಶ್ರೀ ಅಜಿತ್ ಕುಮಾರ್ ರೈ ಮಾಲಾಡಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಬಯಲು ಮಂಟಪದಲ್ಲಿ ಇರಿಸಲಾಗಿದ್ದ ಕಣಿಗೆ ದೀಪ ಹಚ್ಚಿ ಪೂಜೆ ಸಲ್ಲಿಸಿ ಬಿಸು ಹಬ್ಬದ ಸಂಕೇತವಾಗಿ ಬೀಜ ಬಿತ್ತುವ ಕಾರ್ಯಕ್ರಮ (ಕೈಬಿತ್ತ್) ಹಾಗೂ ಗದ್ದೆಯಲ್ಲಿ ಹೊಟ್ಟು ಸುಡುವ ಕಾರ್ಯಕ್ರಮ (ಆರೋಡ್ ಹಬ್ಬ) ಪೂರೈಸಿದರು. ಸಭಾಂಗಣದಲ್ಲಿ ಸಭಾ ಕಾರ್ಯಕ್ರಮವು ಪ್ರಾರಂಭವಾಯಿತು. ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿ ಎಲ್ಲರನ್ನು ಸ್ವಾಗತಿಸಿದರು.

ಸಾಂಸ್ಕೃತಿಕ ಸಮಿತಿಯ ಸದಸ್ಯರು ಹಾಗೂ ಇತರ ಸದಸ್ಯರು ಸೇರಿ ತರಕಾರಿ, ಹಣ್ಣುಗಳು, ಅಕ್ಕಿ ಮುಡಿ ಇನ್ನಿತರ ವಸ್ತುಗಳನ್ನು ಮೆರವಣಿಗೆಯಲ್ಲಿ ತಂದು ಮತ್ತೊಮ್ಮೆ ಕಣಿ ಇಡಲಾಯಿತು. ಕಣಿಗೆ ಅತಿಥಿಗಳು ದೀಪ ಹಚ್ಚಿ ಪೂಜೆ ಮಾಡಿ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆಯನ್ನು ನೀಡಿದರು. ಸಮಿತಿಯ ಯುವ ಸದಸ್ಯರು ಕಣಿಗೆ ಕೈಮುಗಿದು ನೆರೆದಿದ್ದ ಹಿರಿಯರ ಪಾದ ಮುಟ್ಟಿ ಆಶೀರ್ವಾದ ಪಡೆದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ವಹಿಸಿದ್ದರು.

ಅವಿಭಜಿತ ದಕ್ಷಿಣ ಕನ್ನಡದ ಕೆಲವೆಡೆ ಆಚರಣೆಯಲ್ಲಿರುವ "ಕೆಡ್ಡಸ"ದ ಸಂಕೇತವಾಗಿ ಹುರಿದ ಧಾನ್ಯಗಳನ್ನು ಅತಿಥಿಗಳಿಗೆ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ವಿಜಯ ಜೆ. ಶೆಟ್ಟಿಯವರು ವಿತರಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ಕೆಡ್ಡಸದ ವಿಶೇಷ ಧಾನ್ಯವನ್ನು ವಿತರಿಸಲಾಯಿತು. ಬಂಟರ ಸಂಘ ಬೆಂಗಳೂರಿನ ಉಪಾಧ್ಯಕ್ಷರಾದ ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ, ಮಹಿಳಾ ಉಪಾಧ್ಯಕ್ಷರಾದ ಶ್ರೀಮತಿ ಅಮೃತಾ ಎಸ್. ಶೆಟ್ಟಿ, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಖಜಾಂಚಿ ಶ್ರೀ ದೀಪಕ್ ಶೆಟ್ಟಿಯವರು ಉಪಸ್ಥಿತರಿದ್ದರು. ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಶ್ರೀ ಪಿ. ಪ್ರಸಾದ್ ಶೆಟ್ಟಿಯವರು ಧನ್ಯವಾದ ಸಮರ್ಪಿಸಿದರು.

ಸಭಾ ಕಾರ್ಯಕ್ರಮದ ನಂತರ ವೈವಾಹಿಕ ಜೀವನದಲ್ಲಿ 50 ಸಂವತ್ಸರಗಳನ್ನು ಪೂರೈಸಿದ 9 ಜೋಡಿಗಳ ಅಭಿನಂದನಾ

ಕಾರ್ಯಕ್ರಮ, ವಿಶೇಷವಾಗಿ ನಿರ್ಮಿಸಲಾದ ಮಂಟಪದಲ್ಲಿ ಅತ್ಯಂತ ಹೃದಯಸ್ಪರ್ಶಿಯಾಗಿ ಮೂಡಿಬಂತು.

ಅಂತರ್ ಬಂಟರ ಸಂಘ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಸುರತ್ಕಲ್, ಥಾಣೆ, ಸುಳ್ಯ, ಗುರುಪುರ, ಕಾರ್ಕಳ, ಉಳ್ಳಾಲ, ಜಪ್ಪು ಬಂಟರ ಸಂಘಗಳ ಸಾಂಸ್ಕೃತಿಕ ತಂಡಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿದವು. ಪ್ರತಿಯೊಂದು ತಂಡಗಳು ಅತ್ಯಮೋಘ ಪ್ರದರ್ಶನ ನೀಡಿದ್ದು, ಕಾರ್ಯಕ್ರಮ ನೋಡುಗರ ಕಣ್ಣಿಗೆ ಹಬ್ಬವಾಗಿತ್ತು. ಈ ಸ್ಪರ್ಧೆಯಲ್ಲಿ ಕಾರ್ಕಳ ಬಂಟರ ಸಂಘ ಪ್ರಥಮ ಸ್ಥಾನ ಪಡೆದಿದ್ದು, ದ್ವಿತೀಯ ಸ್ಥಾನವನ್ನು ಸುರತ್ಕಲ್ ಬಂಟರ ಸಂಘ ಪಡೆಯಿತು. ತೃತೀಯ ಸ್ಥಾನ ಥಾಣೆ ಬಂಟರ ಸಂಘದ ಪಾಲಾಯಿತು. ಬಿಸು ಸಡಗರದ ಈ ಸ್ಪರ್ಧೆಗೆ ಖ್ಯಾತ ಕಲಾ ನಿರ್ದೇಶಕ ಶ್ರೀ ಶಶಿಧರ ಅಡಪ, ಖ್ಯಾತ ರಂಗ ನಿರ್ದೇಶಕ ಶ್ರೀ ಕೃಷ್ಣಮೂರ್ತಿ ಕವತ್ತಾರ್ ಹಾಗೂ ಖ್ಯಾತ ಸಂಗೀತಗಾರ ಶ್ರೀ ಶಶಿಧರ ಕೋಟೆಯವರು ತೀರ್ಪುಗಾರರಾಗಿ ಭಾಗವಹಿಸಿದ್ದರು.

ವಿಜೇತ ತಂಡಗಳಿಗೆ ಪ್ರಥಮ ಬಹುಮಾನ ಒಂದು ಲಕ್ಷ, ದ್ವಿತೀಯ ಬಹುಮಾನ ಐವತ್ತು ಸಾವಿರ ಹಾಗೂ ತೃತೀಯ ಬಹುಮಾನ ಮೂವತ್ತು ಸಾವಿರ ನಗದನ್ನು ವಿಶೇಷ ಟ್ರೋಫಿಯೊಂದಿಗೆ ನೀಡಲಾಯಿತು. ಸ್ಪರ್ಧೆಗಳ ನಡುವೆ ಖ್ಯಾತ ಮಿಮಿಕ್ರಿ ಕಲಾವಿದ ಶ್ರೀ ಗಿರೀಶ್ ಆರಾಧ್ಯ, ಸರಿಗಮಪ ಲಿಟಲ್ ಚಾಂಪ್ಸ್ ಖ್ಯಾತಿಯ ಕುಮಾರಿ ಸಾನ್ವಿ ಶೆಟ್ಟಿ ಹಾಗೂ ಶ್ರೀ ಸಂತೋಷ ಹೆಗ್ಡೆ ಮತ್ತು ತಂಡದವರು ನೆರೆದವರನ್ನು ರಂಜಿಸಿದರು. ಬಿಸು ಹಬ್ಬದ ಪ್ರಯುಕ್ತ ವಿಶೇಷ ತರಕಾರಿಗಳ ಚಪ್ಪರ, ದಿವಂಗತ ಶ್ರೀ ಎ. ಬಿ ಶೆಟ್ಟಿಯವರ ಹೆಸರಿನಲ್ಲಿ ನಿರ್ಮಾಣಗೊಂಡ ಹಸಿರು ತೆಂಗಿನ ಗರಿ, ಅಡಕೆ, ಬಾಳೆ, ಸಿಂಗಾರ ಹೂ ಮತ್ತಿತ್ತರ ವಸ್ತುಗಳಿಂದ ಅಲಂಕೃತಗೊಂಡಿದ್ದ ವೇದಿಕೆ, ಸಾಂಕೇತಿಕ ಗದ್ದೆ, ಹಲವಾರು ವಿಶೇಷ ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುವ ಆಳೆತ್ತರದ ಪ್ರತಿಮೆಗಳು ಹಾಗೂ ಇನ್ನಿತರ ಅಲಂಕಾರಗಳೊಂದಿಗೆ ಪರಿಪೂರ್ಣ ಹಬ್ಬದ ವಾತಾವರಣ ನಿರ್ಮಾಣಗೊಂಡಿತ್ತು.

ಸಂಜೆ ನಡೆದ ಸಭಾ ಕಾರ್ಯಕ್ರಮದಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿ.ಇ.ಓ ಶ್ರೀ ರಾಜ್‌ಕಿರಣ್ ರೈ, ಎಫ್.ಕೆ.ಸಿ.ಸಿ.ಐ ನ ಅಧ್ಯಕ್ಷರಾದ ಶ್ರೀ ಸುಧಾಕರ ಶೆಟ್ಟಿ, ಖ್ಯಾತ ಹೃದ್ರೋಗ ತಜ್ಞ ಡಾ। ಕೆ. ರವಿಶಂಕರ್ ಶೆಟ್ಟಿ ಮುಂತಾದ ಗಣ್ಯರೊಂದಿಗೆ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ ಹಾಗೂ ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿಯವರು ವೇದಿಕೆಯ ಮುಂಭಾಗದಲ್ಲಿ ಇರಿಸಲಾಗಿದ್ದ ಕಣಿಗೆ ಪೂಜೆ ಸಲ್ಲಿಸಿ



ವೇದಿಕೆಯನ್ನು ಅಲಂಕರಿಸಿದರು. ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿಯವರು ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಸಿ.ಇ.ಓ ಶ್ರೀ ರಾಜ್‌ಕಿರಣ್ ರೈಯವರಿಗೆ ದಿವಂಗತ ಮೂಲ್ಕಿ ಸುಂದರರಾಮ್ ಶೆಟ್ಟಿ ಸ್ಮಾರಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ರಾಧಾಕೃಷ್ಣ ಶೆಟ್ಟಿಯವರು ಪ್ರಶಸ್ತಿ ಪತ್ರವನ್ನು ವಾಚಿಸಿದರು.

ವಿಜಯಾ ಬ್ಯಾಂಕ್ ತನ್ನ ಅಸ್ತಿತ್ವವನ್ನು ಕಳೆದುಕೊಂಡ ಮೇಲೆ ಬಂಟರದೇ ಒಂದು ಆರ್ಥಿಕ ಸಂಸ್ಥೆಯನ್ನು ಹುಟ್ಟು ಹಾಕುವ ಉದ್ದೇಶದಿಂದ ಯೋಜಿಸಿರುವ ಬಂಟ್ಸ್ ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿಯ ಲಾಂಛನ ಬಿಡುಗಡೆಯನ್ನು ಶ್ರೀ ರಾಜ್‌ಕಿರಣ್ ರೈಯವರು ನೆರವೇರಿಸಿದರು.

ಖ್ಯಾತ ಹೃದ್ರೋಗ ತಜ್ಞ ಶ್ರೀ ರವಿಶಂಕರ್ ಶೆಟ್ಟಿ ಕೆ. ಯವರನ್ನು ಸನ್ಮಾನಿಸಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಕಲಾವತಿ ಬಿ. ಶೆಟ್ಟಿಯವರು ಪ್ರಶಸ್ತಿ ಪತ್ರವನ್ನು ವಾಚಿಸಿದರು. ತದನಂತರ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಜೊತೆ ಕಾರ್ಯದರ್ಶಿಗಳಾದ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರು ವಂದನಾರ್ಪಣೆಯನ್ನು ನೆರವೇರಿಸಿದರು. ಶ್ರೀ ದೀಪಕ್ ಶೆಟ್ಟಿ ಮತ್ತು ಶ್ರೀಮತಿ ರಶ್ಮಿ ಶೆಟ್ಟಿಯವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ಸಭಾ ಕಾರ್ಯಕ್ರಮದ ನಂತರ ಶ್ರೀ ಜ್ಞಾನ ಐತಾಳ್ ನೇತೃತ್ವದ ಹೆಜ್ಜೆನಾದ ತಂಡ ಮಂಗಳೂರು ಇವರಿಂದ ವಿಶೇಷ ಮನೋರಂಜನಾ ಕಾರ್ಯಕ್ರಮ ನಡೆಯಿತು.

**ವಿಜಯ್ ಜೆ. ಶೆಟ್ಟಿ ಹಾಲಾಡಿ**

# ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷರಾಗಿ ಐಕಳ ಹರೀಶ್ ಶೆಟ್ಟಿ ಅವಿರೋಧ ಆಯ್ಕೆ

ಮಾರ್ಚ್ 17– ಜಾಗತಿಕ ಮಟ್ಟದ ಬಂಟರ ಸಂಘಗಳ ಸದಸ್ಯತ್ವ ಹೊಂದಿರುವ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯು ಮಾ.17 ರಂದು ಕುರ್ಲಾ ಪೂರ್ವದ ಬಂಟರ ಸಂಘದ ಎನೆಕ್ಸ್ ಸಂಕೀರ್ಣದ ಸಭಾಂಗಣದಲ್ಲಿ ನಡೆಯಿತು. ಒಕ್ಕೂಟದ ಪದಾಧಿಕಾರಿಗಳ ಅವಿರೋಧ ಆಯ್ಕೆಯ ಬಗ್ಗೆ ಚುನಾವಣಾ ಅಧಿಕಾರಿಯಾದ ಶ್ರೀ ಕೆ.ಪೃಥ್ವೀರಾಜ್ ರೈ ವಕೀಲರು ಮಾತನಾಡಿ ಹಿಂದಿನ ಮಹಾಸಭೆಯಲ್ಲಿ ತನ್ನನ್ನು ಚುನಾವಣಾಧಿಕಾರಿಯಾಗಿ ಆಡಳಿತ ಮಂಡಳಿಯು ನೇಮಿಸಿದ್ದು ತದನಂತರ 27/01/2019 ರಂದು ನಡೆದ ಸಭೆಯಲ್ಲಿ ಚುನಾವಣೆಯ ದಿನಾಂಕ ಮತ್ತು ಸ್ಥಳವನ್ನು ನಿಗದಿಮಾಡಿ ಆಡಳಿತ ಮಂಡಳಿಯು ಚುನಾವಣೆಯ ಪ್ರಕ್ರಿಯೆ ನಡೆಸಲು ತನಗೆ ಅಧಿಕಾರ ನೀಡಿದೆ. ನಂತರ ಚುನಾವಣಾ ತಯಾರಿಯ ಪ್ರಕ್ರಿಯೆ ನಡೆದು ವೇಳಾಪಟ್ಟಿಯನ್ನು ಘೋಷಿಸಲಾಗಿದ್ದು, ನಾಮಪತ್ರದ ಕೊನೆಯ ದಿನಾಂಕದಂದು ಎಲ್ಲಾ ಹುದ್ದೆಗಳಿಗೆ ಅಂದರೆ ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಕೋಶಾಧಿಕಾರಿ ಹಾಗೂ ಜೊತೆ–ಕಾರ್ಯದರ್ಶಿ ಈ ಸ್ಥಾನಗಳಿಗೆ ಒಂದೊಂದೇ ನಾಮಪತ್ರ ಬಂದಿದ್ದು, ಚುನಾವಣಾ ವೇಳಾ ಪಟ್ಟಿಯಂತೆ ದಿನಾಂಕ 17/03/2019 ರಂದು ಪದಾಧಿಕಾರಿಗಳಾಗಿ ಶ್ರೀ ಐಕಳ ಹರೀಶ್ ಶೆಟ್ಟಿ ಅಧ್ಯಕ್ಷರು, ಶ್ರೀ ಕರ್ನಿರೆ ವಿಶ್ವನಾಥ ಶೆಟ್ಟಿ ಉಪಾಧ್ಯಕ್ಷರು, ಶ್ರೀ ಜಯಕರ ಶೆಟ್ಟಿ ಇಂದ್ರಾಳಿ ಪ್ರಧಾನ ಕಾಯದರ್ಶಿ, ಶ್ರೀ ಉಳ್ತೂರು ಮೋಹನ್‌ದಾಸ್ ಶೆಟ್ಟಿ ಕೋಶಾಧಿಕಾರಿ ಮತ್ತು ಶ್ರೀ ಸತೀಶ್ ಅಡಪ್ಪ ಸಂಕಬೈಲ್ ಜೊತೆ ಕಾರ್ಯದರ್ಶಿಯಾಗಿ ಅವಿರೋಧ ಆಯ್ಕೆ–ಯಾಗಿರುತ್ತಾರೆಂದು ಘೋಷಣಾ ಪತ್ರ ನೀಡಿ ಅಭಿನಂದಿಸಿದರು.

ಈ ಚುನಾವಣೆ ಬಗ್ಗೆ ಅಕ್ಟೋಬರ್ 2018 ರಲ್ಲಿ ಬೈಲಾ ತಿದ್ದುಪಡಿ ಮಾಡಲಾಗಿದ್ದು, ಹಾಗೂ ಅದಕ್ಕೆ ಸಹಕರಿಸಿದ ಡಾ. ಪ್ರಭಾಕರ್ ಶೆಟ್ಟಿ ಮುಂಬೈ, ಕರ್ನಲ್ ಶರತ್ ಭಂಡಾರಿ, ಒಕ್ಕೂಟದ ಅಧ್ಯಕ್ಷರಾದ ಶ್ರೀ ಐಕಳ ಹರೀಶ್ ಶೆಟ್ಟಿ, ಕಾರ್ಯದರ್ಶಿ ಶ್ರೀ ವಿಜಯಪ್ರಸಾದ್ ಆಳ್ವ, ಕೋಶಾಧಿಕಾರಿ ಶ್ರೀ ಕೊಲ್ಲಾಡಿ ಬಾಲಕೃಷ್ಣ ರೈ, ಜೊತೆ ಕಾರ್ಯದರ್ಶಿ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಹಾಗೂ ಚುನಾವಣಾ ಪ್ರಕ್ರಿಯೆಗೆ ಸಹಕರಿಸಿದ ಆಡಳಿತ ಕಛೇರಿಯ ಶ್ರೀ ಸಚ್ಚಿದಾನಂದ ಹೆಗ್ಡೆ ಕೊಳ್ಕೆಬೈಲ್ ಆಡಳಿತಾಧಿಕಾರಿ, ಶ್ರೀಮತಿ ರೇಷ್ಮಾ ರಿತೇಶ್ ಶೆಟ್ಟಿ ಸಮಾಜ ಸೇವಾ ಅಧಿಕಾರಿ, ಕುಮಾರಿ ಸಿಂದಿಯಾ ಶೆಟ್ಟಿ ಅಕೌಂಟೆಂಟ್ ಹಾಗೂ ಸಹಕರಿಸಿದ ಎಲ್ಲರಿಗೂ ಧನ್ಯವಾದ ನೀಡಿದರು.

ತದನಂತರ ನೂತನ ಪದಾಧಿಕಾರಿಗಳು ಆಸನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಒಕ್ಕೂಟದ ನಿರ್ದೇಶಕರು, ಮಹಾ ಪೋಷಕರು, ದಾನಿಗಳು, ಆಡಳಿತ ಮಂಡಳಿ ಸದಸ್ಯರು, ವಿವಿಧ ಬಂಟರ ಸಂಘಗಳ ಅಧ್ಯಕ್ಷರುಗಳು ಹಾಗೂ ಸಮಾಜದ ಬಾಂಧವರು ಹಾಜರಿದ್ದರು. ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ ಇವರ ವಂದನಾರ್ಪಣೆಯೊಂದಿಗೆ ಚುನಾವಣೆಯ ಅಂತಿಮ ಪ್ರಕ್ರಿಯೆಯು ಮುಕ್ತಾಯವಾಯಿತು.

# ಸಹಾಯದೊಳಗಿನ ಮಾಯ



ಡಾ. ನಾಗರಮಠ ಜಯರಾಮ ಶೆಟ್ಟಿ

ಹಿಮಾಲಯದ ತಪ್ಪಲು ಪ್ರದೇಶದ ನಿವಾಸಿಯಾತ. ಕುದುರೆ ಸಾಕಣೆಯಲ್ಲಿ ವಿಶೇಷ ಆಸಕ್ತಿ ಬೆಳೆಸಿಕೊಂಡು ಹದಿನೇಳು ಕುದುರೆಗಳ ಮಾಲಕನಾಗಿದ್ದ. ಆತನ ಮೂರು ಗಂಡು ಮಕ್ಕಳಾದರೋ ಶುದ್ಧ ಸೊಂಬೇರಿಗಳು. ಅಪ್ಪನ ನಿಯತ್ತು ಯಾವತ್ತು ಅವರಲ್ಲಿ ಇಲ್ಲವಾಗಿತ್ತು. ಜೀವನದ ಅಂತ್ಯಕಾಲ ಸಮೀಪಿಸುತ್ತಿದ್ದಂತೆ, ಮುದುಕ ತಂದೆ, ಒಲ್ಲದ ಮನಸ್ಸಿನಿಂದ ವಿಲ್‌ನಾಮೆಯೊಂದನ್ನು ಬರೆದು, ಅದನ್ನು ಊರಿನ ಗಣ್ಯ ವ್ಯಕ್ತಿಗೆ ತಲುಪಿಸಿ, ಸಾವನ್ನಪ್ಪುತ್ತಾರೆ. ತಂದೆಯ ನಿಧನವಾಗುತ್ತಲೇ, ಆ ಹದಿನೇಳು ಕುದುರೆಗಳ ಪಾಲಿಗಾಗಿ ಕತ್ತಿ–ಚೂರಿ ಜಗಳವಾಡುವುದನ್ನು ತಿಳಿದು, ಗಣ್ಯವ್ಯಕ್ತಿ ಓಡೋಡಿ ಬಂದು ಸಮಜಾಯಿಸುತ್ತಾರೆ. 'ಈ ಕುದುರೆಗಳ ವಿಭಜನೆಗಾಗಿ ಕಚ್ಚಾಟವೇ? ಎಂಥ ತಂದೆಗೆ ಎಂತಹ ಮಕ್ಕಳು ಆಹಾ!' ನಿಮ್ಮ ತಂದೆಯ ಇಚ್ಛೆಯಂತೆ ನಿಮ್ಮ ಭಾಗ ಹೀಗೆ – ಹಿರಿಯವನಿಗೆ ಅರ್ಧ ಭಾಗ, ಮಧ್ಯದವನಿಗೆ ಮೂರನೆ ಒಂದು, ಕೊನೆಯವನಿಗೆ ಒಂಭತ್ತನೇ ಒಂದು ಭಾಗದಷ್ಟು ಕುದುರೆಗಳು'.

ಮಕ್ಕಳ ಜಗಳ ತಾರಕಕ್ಕೇರುತ್ತದೆ. ತಂದೆಗೆ ಹಿಡಿಶಾಪ ಹಾಕುತ್ತಲೇ ಹೇಳಿಕೊಳ್ಳುತ್ತಾರೆ 'ನಮ್ಮ ಅಪ್ಪ ಜೀವಿತ ಕಾಲಕ್ಕೆ ಸಮಸ್ಯೆಯಾಗಿದ್ದ. ಈಗ ಸಾಯುತ್ತಲೇ ಗಣಿತದ ಸಮಸ್ಯೆಯೊಂದನ್ನು ಮುಂದಿಟ್ಟು ಸತ್ತನಲ್ಲಪ್ಪ! ಅಲ್ಲ, 17 ಕುದುರೆಗಳನ್ನು ಈ ದರಿದ್ರ ಲೆಕ್ಕದಂತೆ ವಿಭಜಿಸುವುದಾದರೂ ಹೇಗೆ?' ದೂರದಲ್ಲಿ ನಿಂತು ನಸುನಗುತ್ತಲೇ ಗಣ್ಯವ್ಯಕ್ತಿ ಹೇಳುತ್ತಾರೆ ' ಅಲ್ರಪ್ಪಾ, ಪುನಃ ಶುರು ಹಚ್ಕೊಂಡ್ರಾ ... ಇಕೋ ತಕ್ಕೊಳ್ರಿ ನನ್ ಕುದುರೆಯನ್ನ ಸೇರಿಸಿಕೊಂಡು ಹಂಚಿಕೊಳ್ಳಿ.' ಮಕ್ಕಳಿಗೆ ಈಗ ಸಮಾಧಾನವಾಗುತ್ತಲೇ, ಗಣ್ಯರು ಮುಂದೆ ನಿಂತು ಕುದುರೆಗಳನ್ನು ಹಂಚುವ ಮುನ್ನ ಆದೇಶವೊಂದನ್ನು ಮುಂದಿಡುತ್ತಾರೆ 'ತಂದೆಯ ವಿಲ್‌ನಾಮೆಪ್ರಕಾರ ನಿಮ್ಮ ಭಾಗದ ಕುದುರೆಗಳು ಸಿಗುತ್ತಲೇ ಹಿಂದೆ ನೋಡದೆ ನಿಮ್ಮ ದಾರಿಯಲ್ಲಿ ಹೋಗುತ್ತಿರಬೇಕು'. ಲೆಕ್ಕದಂತೆ, 18 ಕುದುರೆಗಳ ಅರ್ಧ ಅಂದರೆ 9 ಹಿರಿಯನಿಗೂ, ಮೂರನೆ ಒಂದು ಭಾಗ ಅಂದರೆ 6 ಮಧ್ಯಮನಿಗೂ, ಒಂಭತ್ತನೇ ಒಂದು ಭಾಗ ಅಂದರೆ 2 ಕುದುರೆಗಳನ್ನು ಕಿರಿಯನಿಗೆ ಹಂಚಿ ಉಳಿದ ಒಂದು ಕುದುರೆಯನ್ನು ತಾನೇ ಪಡೆದು ಅಲ್ಲಿಂದ ತೆರಳುತ್ತಾರೆ.

ಈ ಕಿರುಗತೆ ನಮಗೆ ಅನೇಕ ಸಂದೇಶಗಳನ್ನು ತಲುಪಿಸುವಷ್ಟು ಸಶಕ್ತವಾಗಿದೆ. 18 ನೇ ಕುದುರೆಯ ಸೇರ್ಪಡೆ ಇಡೀ ಸಮಸ್ಯೆಗೆ ಪರಿಹಾರ ಒದಗಿಸುತ್ತದೆ. ಸಮಸ್ಯೆಗೆ ಪರಿಹಾರ ಒದಗಿಸಿ ತಾನು ಏನನ್ನೂ ಕಳೆದು ಕೊಳ್ಳುವುದಿಲ್ಲ! ನಮ್ಮ ಸುತ್ತಮುತ್ತಲಿನ ಅದೆಷ್ಟೋ ಸಮಸ್ಯೆಗಳಿಗೆ, ಈ ಕತೆಯ ಗಣ್ಯವ್ಯಕ್ತಿಯ ರೂಪದಲ್ಲಿ ನಾವು ಕಾಣಿಸಿಕೊಳ್ಳಬಹುದು. ಸಹಾಯ ಹಸ್ತಚಾಚುವುದರಲ್ಲಿ ನಾವು ಏನನ್ನೂ ಕಳೆದುಕೊಳ್ಳಬೇಕಾಗಿಲ್ಲ. ಪ್ರಪಂಚದ ಒಂದು ಭಾಗದ ಬೇಗುದಿಗೆ, ಇನ್ನೊಂದು ಭಾಗ ಸಕಾರಾತ್ಮಕವಾಗಿ ಸ್ಪಂದಿಸಿ, ವಿಶ್ವಶಾಂತಿಗೆ ಮುನ್ನುಡಿ ಬರೆಯ ಬಹುದಲ್ಲವೇ?

ನಮ್ಮ ದೈನಂದಿನ ಬದುಕಿನಲ್ಲಿ, ವ್ಯಕ್ತಿ–ವ್ಯಕ್ತಿ ಸಂಬಂಧಗಳಲ್ಲಿ ನಾವು 18ನೇ 'ಮಾಯಾ' ಕುದುರೆಯಾಗಲು ಸಾಧ್ಯವೇ? ಖಂಡಿತವಾಗಿಯೂ ಸಾಧ್ಯವಿದೆ. ಆಯಾದಿನದ ಪ್ರಾಮಾಣಿಕ ಚಟುವಟಿಕೆ, ಆಯಾ ದಿನದ ಔದಾರ್ಯದ ಮಾತುಗಳು, ಆಯಾದಿನದ ಸತ್ಕರ್ಮಗಳೇ ಸದ್ಯಕ್ಕೆ ಸಾಕು. ಇಂದಿನಿಂದ 30 ದಿನಗಳ ಕಾಲ ಈ ಮೂರು ಆಯಾಮಗಳಲ್ಲಿ '18ನೇ' ಕುದುರೆಯಾಗಿ ನಿಮ್ಮನ್ನು ನೀವು ಪರಿವರ್ತಿಸಿ ಕೊಳ್ಳಿ. ನಂತರದ ಪವಾಡಕ್ಕೆ ನೀವೇ ಸಾಕ್ಷಿಯಾಗುವಿರಿ.

# ಬ್ಯಾಂಕುಗಳ ವಿಲೀನ ಪ್ರಕ್ರಿಯೆ ಜನ ಸಾಮಾನ್ಯರ ಹಿತ್ತಾಸಕ್ತಿ ಕಾಪಾಡ ಬಲ್ಲದೇ?



ಸತ್ಯೋದಯ ಹೆಗ್ಡೆ


ಬ್ಯಾಂಕ್ ಆಫ್ ಬರೋಡಾದೊಂದಿಗೆ ವಿಲೀನಗೊಂಡಿರುವ ಅವಿಭಜಿತ ದಕ್ಷಿಣ ಕನ್ನಡದ ಜಿಲ್ಲೆಯ ಪ್ರತಿಷ್ಠಿತ ಬ್ಯಾಕಿಂಗ್ ಸಂಸ್ಥೆ ವಿಜಯ ಬ್ಯಾಂಕ್. ಆಗ್ರ ಶ್ರೇಣಿಯ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕಳೆದ ಹಲವಾರು ವರ್ಷಗಳಿಂದ ಲಾಭದಾಯಕವಾಗಿ ನೆಲೆಸಿರುವ ವಿಜಯ ಬ್ಯಾಂಕ್ ದೇಶದಾದ್ಯಂತ 2129 ಶಾಖೆಗಳನ್ನು ಹೊಂದಿದ್ದು 2.80 ಲಕ್ಷ ಕೋಟಿ ರೂಪಾಯಿ ವ್ಯವಹಾರ, 15800ಕ್ಕೂ ಹೆಚ್ಚು ನೌಕರರನ್ನು ಹೊಂದಿದ್ದು, ಎನ್.ಪಿ.ಎ ಪ್ರಮಾಣ ಶೇ 5.4 ದಲ್ಲಿದ್ದು, ನಷ್ಟದಲ್ಲಿರುವ 2 ಬ್ಯಾಂಕುಗಳಾದ ಬ್ಯಾಂಕ್ ಆಫ್ ಬರೋಡ ಮತ್ತು ದೇನಾ ಬ್ಯಾಂಕ್‌ಗಳೊಂದಿಗೆ ವಿಲೀನ ಪ್ರಕ್ರಿಯೆಗೆ ಕೇಂದ್ರ ಸರಕಾರ ಆದೇಶ ಹೊರಡಿಸಿ ಈ ಮೂರು ಬ್ಯಾಂಕ್‌ಗಳು ಬ್ಯಾಂಕ್ ಆಫ್ ಬರೋಡಾದ ಹೆಸರಿನಿಂದ ಏಪ್ರಿಲ್ 1 ರಿಂದ ಕಾರ್ಯ ನಿರ್ವಹಿಸುತ್ತಿದೆ. ದೇಶದ ಆರ್ಥಿಕ ಸ್ಥಿತಿ ವೃದ್ಧಿಗೊಳ್ಳಬೇಕೆಂದರೆ ಸೇವಾ ಕ್ಷೇತ್ರಗಳ ವ್ಯಾಪ್ತಿ ಹೆಚ್ಚಬೇಕೆಂಬುದು ನಮ್ಮ ಆಡಳಿತ ವ್ಯವಸ್ಥೆಯ ಘೋಷಣೆಯಾಗಿದೆ. ಆದರೆ ಬ್ಯಾಂಕ್‌ನಂತಹ ಸೇವಾ ವಲಯದಲ್ಲಿ ನಷ್ಟದಲ್ಲಿರುವ ಬ್ಯಾಂಕ್ ಆಫ್ ಬರೋಡದೊಂದಿಗೆ ಲಾಭದಲ್ಲಿರುವ ವಿಜಯಬ್ಯಾಂಕನ್ನು ವಿಲೀನಗೊಳಿಸಿ ಬ್ಯಾಂಕ್ ಆಫ್ ಬರೋಡಾದ ಹೆಸರಿಟ್ಟು ಕೊಂಡು ಕಾರ್ಯ ನಿರ್ವಹಿಸುವುದು ಎಷ್ಟು ಸಮಂಜಸ ಎಂಬ ಗಂಭೀರ ಪ್ರಶ್ನೆ ಎದ್ದಿದೆ. 1931ರಲ್ಲಿ ಮಂಗಳೂರಿನಲ್ಲಿ ಸ್ಥಾಪಿಸಿಲಾದ ವಿಜಯ ಬ್ಯಾಂಕ್ ಬ್ಯಾಕಿಂಗ್ ಸೌಲಭ್ಯವಿರದ ಸ್ಥಳಗಳಲ್ಲಿ ಹೊಸ ಹೊಸ ಶಾಖೆಗಳನ್ನು ಪ್ರಾರಂಭಿಸಿ, ರಿಸರ್ವ್ ಬ್ಯಾಂಕಿನ ನೀತಿ ಸಂಹಿತೆಯಲ್ಲಿಯೇ ಸೇವಾ ಸೌಲಭ್ಯಗಳನ್ನು ಉತ್ತೇಜಿಸಿ, ಜನ ಸಾಮಾನ್ಯರ ಹಿತಾಸಕ್ತಿಗೆ ಸ್ಪಂದಿಸಿ ಲಾಭದಾಯಕ ಬ್ಯಾಂಕ್ ಆಗಿ ದೃಢವಾಗಿ ನೆಲೆನಿಂತಿತ್ತು. ದೇಶದ ಎಲ್ಲಾ ರಾಜ್ಯಗಳಲ್ಲಿ ಶಾಖೆಗಳನ್ನು ಹೊಂದಿರುವ ವಿಜಯಾ ಬ್ಯಾಂಕ್‌ನ ಶೇ.60ರಷ್ಟು ಶಾಖೆಗಳು ಗ್ರಾಮೀಣ ಪ್ರದೇಶದಲ್ಲಿದೆ.

ನಮ್ಮ ದೇಶದಲ್ಲಿ ಶ್ರೀಮಂತರಿಗಿಂತ ಬಡ ಮತ್ತು ಮಧ್ಯಮ ವರ್ಗದವರೇ ಹೆಚ್ಚಾಗಿರುವ ವಾಸ್ತವಾಂಶದಲ್ಲಿ ಮಧ್ಯಮ ವರ್ಗದ ವಿಜಯ ಬ್ಯಾಂಕ್ ಮಹತ್ತರ ಪ್ರಗತಿಯನ್ನು ಸಾಧಿಸಿದೆ. ಇದಕ್ಕೆ ತದ್ವಿರುದ್ಧವಾಗಿ ಬಹುತೇಕ ಸ್ಥಿತಿವಂತರ ಬೇಕು-ಬೇಡಗಳತ್ತಲೇ ಒಲವು ತೋರುತ್ತಾ ಇರುವ ದಿಗ್ಗಜ ಬ್ಯಾಂಕಿನೊಂದಿಗೆ, ಲಾಭದಾಯಕವಾದ ಮಧ್ಯಮ ವರ್ಗದ ವಿಜಯ ಬ್ಯಾಂಕನ್ನು 'ವಿಲೀನಿಕರಣಗೊಳಿಸಿ ಸಾಧಿಸುವುದೇನು' ಎಂಬುದಾಗಿ ಪ್ರಶ್ನೆ ಮಾಡುವಂತಾಗಿದೆ. ದೇಶದಲ್ಲಿ ಈಗಾಗಲೇ ಸ್ಟೇಟ್‌ಬ್ಯಾಂಕ್ ಸಮೂಹಗಳೊಂದಿಗೆ ವಿಲೀನಿಕರಣಗೊಂಡಿರುವ ನಮ್ಮ ದೇಶದ ದಿಗ್ಗಜ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಣ್ಣ ಭೂಹಿಡುವಳಿದಾರರು, ಉದ್ದಿಮೆದಾರರ ಆಶೋತ್ತರಗಳಿಗೆ ಹೇಳಿಕೊಳ್ಳುವಂತೆ ಸ್ಪಂದಿಸುತ್ತಿಲ್ಲವೆಂಬುದು ಈಗಿನ 3 ಬ್ಯಾಂಕ್‌ಗಳ

ವಿಲೀನಕ್ಕೆ ಆಕ್ಷೇಪ ಎತ್ತಿದವರ ಹಾಗೂ ಮುಷ್ಕರ ಹೂಡಿದವರ ದೂರು ಆಗಿದೆ. ವಿಜಯ ಬ್ಯಾಂಕ್ ಶಾಖೆಗಳನ್ನು ಈ ಬ್ಯಾಂಕಿನಿಂದ ದೊಡ್ಡದಾದ ನಷ್ಟದ ಬ್ಯಾಂಕ್ ಆಫ್ ಬರೋಡಾದಲ್ಲಿ ವಿಲೀನ–ಗೊಳಿಸುವುದೆಂದರೆ ವಿಜಯ ಬ್ಯಾಂಕಿನ ಬಹುಸಂಖ್ಯೆಯ ಉದ್ಯೋಗಸ್ಥರಿಗೆ ವಿ ಆರ್ ಎಸ್ ನೀಡಲು ಆಸ್ಪದವಾಗುತ್ತದೆ. ಈಗಾಗಲೇ ಬ್ಯಾಂಕ್ ಆಫ್ ಬರೋಡಾದ ಆಡಳಿತವು ವಿಜಯ ಬ್ಯಾಂಕಿನ ಉದ್ಯೋಗಸ್ಥರಿಗೆ ವಿ ಆರ್ ಎಸ್‌ನ ಆಯ್ಕೆ ಮಾಡಲು ಸೂಚನೆ ನೀಡಿ ಆಘಾತವನ್ನು ನೀಡಿದೆ. ಹೊಸತಾಗಿ ವಿಜಯ ಬ್ಯಾಂಕ್ ಸೇರಿಕೊಂಡ ತರಬೇತಿಯ ಹಂತದಲ್ಲಿರುವ ನೌಕರರನ್ನು ನಿರ್ದಿಷ್ಟ ಮೊತ್ತದ ಪರಿಹಾರ ನೀಡಿ ಕೆಲಸದಿಂದ ಬಿಡಿಸುವುದು ಕೂಡಾ ಬ್ಯಾಂಕ್ ಆಫ್ ಬರೋಡಾ ಆಡಳಿತ ಮಂಡಳಿಯ ಯೋಚನೆಗೆ ಒಳಗಾಗಿದೆ ಎಂಬ ಸುದ್ದಿ ಬ್ಯಾಂಕಿನ ವಲಯದಲ್ಲಿ ಹರಡುತ್ತಿದೆ.

ಈ ವಿಲೀನೀಕರಣದಲ್ಲಿ ಅಂತರ್‌ರಾಷ್ಟ್ರೀಯ ಬ್ಯಾಂಕ್‌ಗಳಿಗೆ ಪರ್ಯಾಯವಾಗಿ ಭಾರತೀಯ ಬ್ಯಾಂಕ್‌ನ್ನು ಕೂಡಾ ದೊಡ್ಡದಾಗಿ ಬೆಳೆಸಿ ಬ್ಯಾಂಕಿನ ವ್ಯವಹಾರದ ಪೈಪೋಟಿ ನಡೆಸುವುದು ಕೇಂದ್ರ ಸರಕಾರದ ಆಶಯವಾಗಿರಬಹುದು. ಇದಕ್ಕೆಂದೇ ಈ ಹಿಂದೆ ಇತರ ಸಹವರ್ತಿ ಸ್ಟೇಟ್‌ಬ್ಯಾಂಕ್ ಸಮೂಹವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ ವಿಲೀನಗೊಳಿಸಿತು. ಕಡಿಮೆ ಲಾಭ ಕಾಣುತ್ತಿರುವ ಬ್ಯಾಂಕುಗಳು ದೊಡ್ಡ ಬ್ಯಾಂಕಿನೊಂದಿಗೆ ಬೆರೆತರೆ ಆರ್ಥಿಕ ಸ್ಥಿರತೆ ಸಾಧ್ಯವೆಂದು ಹಿಂದಿನ ಕೇಂದ್ರ ಸರ್ಕಾರದ ವಿಲೀನೀಕರಣ ಯೋಜನೆಯಾಗಿತ್ತು. ವಿಲೀನೀಕರಣ–ದಿಂದಾಗಿ ಬ್ಯಾಂಕಿನ ವ್ಯವಸ್ಥಿತ ಪುನರ್‌ರಚನೆಗಾಗಿ ವಿಶ್ವಬ್ಯಾಂಕಿನಿಂದ ಸಾಲ ಮಂಜೂರಾತಿ ಮಾಡಿಸಿ ಸುಲಭವಾಗಿ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡಬಹುದೆಂಬುದು ಆಗಿನ ಕೇಂದ್ರ ಸರಕಾರದ ಲೆಕ್ಕಾಚಾರವಾಗಿತ್ತು. ಆದರೆ ಈಗಿನ 3 ಬ್ಯಾಂಕುಗಳ ವಿಲೀನೀಕರಣ ಪ್ರಕ್ರಿಯೆಯ ವಿಪರ್ಯಾಸವೇನೆಂದರೆ, ನಷ್ಟದಲ್ಲಿರುವ ಬ್ಯಾಂಕ್ ಆಫ್ ಬರೋಡಾಕ್ಕೆ ನಿರಂತರ ಲಾಭದಲ್ಲಿರುವ ವಿಜಯಾ ಬ್ಯಾಂಕನ್ನು ವಿಲೀನಗೊಳಿಸಿ ಬ್ಯಾಂಕ್ ಆಫ್ ಬರೋಡದ ಹೆಸರಿನಿಂದಲೇ ಎಪ್ರಿಲ್ 1 ರಿಂದ ಕಾರ್ಯ ನಿರ್ವಹಿಸಲು ಈಗಿನ ಕೇಂದ್ರ ಸರಕಾರ ಆದೇಶಿಸಿ ಅವಿಭಜಿತ ದಕ್ಷಿಣ ಕನ್ನಡದ ಹೆಮ್ಮೆಯ ಲಾಭದಾಯಕ ವಿಜಯ ಬ್ಯಾಂಕ್‌ನ ಅಸ್ತಿತ್ವವನ್ನೇ ಕಸಿದಿದೆ. ಸರ್ಕಾರಿ ಮತ್ತು ಖಾಸಗಿ ವಲಯಗಳೆರಡರ ಹಳೆಯ ಮತ್ತು ಇಂದಿನ ತಲೆಮಾರಿನ ಬ್ಯಾಂಕ್ ಸಿಬ್ಬಂದಿ ವಿಲೀನವು ದೇಶದ ಹಿತಕ್ಕೆ ವಿರುದ್ಧವಾದುದೆಂದು ಮುಷ್ಕರಗಳ ಮೂಲಕ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮುಷ್ಕರಗಳು ಯಶಸ್ವಿಯಾಗಿದ್ದರೂ ದೇಶದಾದ್ಯಂತ ಭಾರೀ ವಿರೋಧದ ನಡುವೆಯೂ ಗ್ರಾಹಕರಿಗೆ ಹೆಚ್ಚಿನ ಸೌಲಭ್ಯಗಳು, ಅವಕಾಶಗಳನ್ನು ಕಲ್ಪಿಸುವ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡು 3 ಬ್ಯಾಂಕುಗಳ ವಿಲೀನ ಪ್ರಕ್ರಿಯೆಗೆ ಮುಂದಾದ ಈಗಿನ ಕೇಂದ್ರ ಸರಕಾರದ ಈ ಯೋಜನೆ ಯಾರ ಹಿತಾಸಕ್ತಿಯನ್ನು ಕಾಪಾಡಬಲ್ಲದು ಹಾಗೂ ಇದರ ಪರಿಣಾಮವೇನೆಂಬುದನ್ನು ಮುಂದಿನ ದಿನಗಳಲ್ಲಿ ಕಾದು ನೋಡಬೇಕಾಗಿದೆ.

# PLAN FOR CENTURY



Cherkady Sachidananda Shetty

"If you plan for a year sow the seed, if you plan for a decade plant a tree, if you plan for a century educate the people"- Chinese Proverb

EDUCATION has continued to evolve, diversify and extend its reach and coverage, since the dawn of human history. Nobody's pen can command to envelope the area of education with few lines, but here are the few dried up debated lines to attempt and to refocus upon education and morale.

It may be appropriate to throw some light on the anvil of the ensuing academic year, not only on students but also on supporting parents and elders. Employing time, money, labour and means for the purpose of education is an invaluable investment and the ultimate result of which would be an ornamental asset for centuries to our country.

Great educationists have contributed towards the development and evolution of education as a discipline. Thus education has been enriched and enshrined in the society and nation. It may not be wrong if we say that the standard and ranking of universities of the world gauges the magnanimity of a country.

The real education makes a man understand the values of discipline, dignity, decorum and the sanctity of the attitude, so that we can enumerate that education will be used as an agent of basic change in the status of a citizen, what we call as morale or 'value education.' Education should widen our vision, increase our creative ability and offer us values to cherish our courage to hold on to them steadfastly, it is that promotes rational thinking and roots out blind beliefs and baseless superstition. It is what drives out darkness in our minds and makes us really who are certainly needed to usher in a new economic order and make our country big and rich. That which makes our dreams come true should be the kind of education we should impart to our future citizens and that would build a strong foundation for centuries.

Today education in India stands at cross roads but dynamism can be achieved with energy, enthusiasm and

character of youngsters coupled with timely direction of experience and wisdom of parents, elders and all concerned so that the erosion of the long accepted values can be obviated and restored.


'Studying abroad,' the rising aspirant level of the students and researchers in India triggers this phenomenon. It is a matter of serious concern and tremendous consequences that educational norms in the west and those in India are pathetic to note that "all the best brains are crossing the oceans to reach the west", for professional higher education and at the same time those who studied with meritorious distinction in the premier institution of our country take up the profession abroad. When are we going to control the brain drain? Which is especially in the area of research, in this direction budgetary allocation needs to be improved. "For Indians should come to realize that the grass may not always be green in the distant lands."

Let us all hope that in the near future there will be two digit Indian Universities within the umbrella of the best 200 world universities with culmination and combination of varied Indian culture and heritage.

## *Academic Excellence*

## *Congratulations!*

### SSLC/10th Std. Achievers



**Sannidhi S. Shetty**

**D/o Surendra Shetty Cherkady and Malathi S. Shetty Giliyar**

**SSLC- 96.32%**

**Hymamshu Jyothi Peetha School, Malleshwaram, Bangalore**



**Suraksha R. Shetty**

**D/o Rajesh Kumar Shetty Karikatti and Suchithra R. Shetty**

**SSLC- 95.36% (English - 100)**

**Holy Child English High School, Ashok Nagar, Bangalore**

# ಒಂಟಿಮನೆ



ಮಂಗಳಾ ಪ್ರಕಾಶ್ ಶೆಟ್ಟಿ

ಮನೆ ಮುಂದಿನ ಮಾವಿನ ಮರದಲ್ಲಿ ಕುಳಿತು ಒಂಟಿ ಕಾಗೆ ಕಾವ್ ಕಾವ್ ಎಂದು ಒಂದೇ ಸಮನೆ ಕೂಗುತ್ತಿದ್ರೆ ಕೊಟ್ಟಿಗೆಯಲ್ಲಿ ಕಾಳಿದನ ಅಂಬಾ ಎಂದು ಅರಚುತ್ತಿತ್ತು. ರಾತ್ರಿಯೆಲ್ಲಾ ಆಚೆ–ಈಚೆ ಹೊರಳಾಡಿ ಬೆಳಗಾಗೋ ಹೊತ್ತಿಗೆ ಕಣ್ಣು ಮುಚ್ಚಿ ಬಂದಿತ್ತು. ಏಳಲು ಮನಸ್ಸಿಲ್ಲದಿದ್ದರೂ ಎದ್ದು "ಅಯ್ಯಬ್ಬಾ ಯಾರ್ ಜೀವಾ ಯಾಕ್ ಹೋತಿಲ್ಲಪ್ಪಾ" ಅಂತ ಎದ್ದೆ. ಪಕ್ಕದ ಮಂಚದ ಮೇಲೆ ಮಲಗಿದ್ದ ಯಜಮಾನ್ರು ಕಾಣಲಿಲ್ಲ. ಇಡೀ ರಾತ್ರಿ ನಿದ್ದೆ ಬಾರದೆ ಅವರೂ ಹೊರಳಾಡುತ್ತಿದ್ದರು. ಅವರ ಒದ್ದಾಟದಿಂದ ನನಗೂ ನಿದ್ರೆ ಬಾರದಿರಲು "ಎಂತಾ ಮಾರಾರ್ರೆ ಎಂತಾ ಒದ್ಕಂತಿದ್ರಿ ಸುಮ್ನೆ ಮನ್ಕಂಬುಕ್ ಆತಿಲ್ಯಾ? ನಿಮ್ ಕಡಿಂದ ನಂಗೂ ಬಪ್ಪ ನಿದ್ರೆ ಬತ್ತಿಲ್ಲ" ಅಂತ ಜೋರಾಗೆ ಕೂಗಿದೆ. 'ಪಾಪ ರಾತ್ರಿ ಅವರೆದ್ದು ಪಡಸಾಲೆಲಿ ಮಲಗಿದ್ದಾರೋ ಏನೋ' ಎಂದುಕೊಳ್ತಾ ಅಡಿಗೆ ಮನೆಯ ಗೋಡೆಗೆ ನೇತು ಬಿದ್ದಿದ್ದ ರೇಡಿಯೋ ಕಿವಿ ತಿರುಚಿ ಹಿತ್ತಲ ಬಾಗಿಲು ತೆರೆದೆ. ಬೆಳಿಗ್ಗೆ 6 ಗಂಟೆಗೆಲ್ಲಾ ವೈಶಾಖದ ಸೂರ್ಯ ಝಳ–ಝಳ ಅಂತ ಹೊಳಿತಿದ್ದ. "ಅಬ್ಬಬ್ಬಾ ಎಂದಿಗ್ ಮಳಿ ಆತ್ತೋ" ಅಂದುಕೊಳ್ಳುತ್ತಾ ಕೊಟ್ಟಿಗೆಗೆ ಬಂದೆ. ಕೊಟ್ಟಿಗೇಲಿ ಕಾಳಿದನ ಅತ್ತಿಂದಿತ್ತ ಹಗ್ಗ ಜಗ್ಗಾಡುತ್ತಿತ್ತು. ಪಾಪ ಬಾಯಾರಿರಬೇಕು ಎಂದು ಮಗ್ಗುಲಲ್ಲಿದ್ದ ಬಾವಿಯಿಂದ ನೀರು ಸೇದಲಿಕ್ಕೆ ಹೋದೆ. ನೀರು ಪಾತಾಳ ಮುಟ್ಟಿತ್ತು. 'ಇದೇ ಬಿಸಿಲು ಮುಂದುವರಿದರೆ ತೋಟಕ್ಕೆ ನೀರು ಬಿಟ್ಟು ಕುಡಿಯಲ್ಲಿಕ್ಕೂ ನೀರಿಲ್ಲ' ಅಂದುಕೊಳ್ತಾ ನೀರು ಸೇದಲಿಕ್ಕೆ ಹೋದರೆ ಬೆನ್ನು 'ಅಯ್ಯೊಯ್ಯೋ' ಎಂದು ಬೊಬ್ಬಿಡುತ್ತಿತ್ತು.

ಕಾಳಿದನ ಮತ್ತೆ ಅಂಬಾ ಎಂದು ಬೊಬ್ಬೆ ಇಟ್ಟಿತು. "ಇರು ಮಾರಾತಿ ನಂಗೇನಾರು ಸಣ್ ವಯಸ್ಸಾ? ನಿಂಗೊಂಚೂರು ಗೊತ್ತಾತಿಲ್ಲ. ಈ ಮುದ್ಕ–ಮುದ್ಕಿ ಎಂತಾ ಮಾಡೂದು? ಇದ್ದೊಬ್ಬ ಮಗ ಒಳ್ಳೆ ರೀತಿ ಓದೂದ್ರೂ ಮೀಸಲಾತಿ, ಮೀಸಲಾತಿ ಅಂಬೋ ಈ ದೇಶ್‌ದಂಗೆ ಕೆಲ್ಸ ಸಿಗದೇ ಮೊನ್ನೆ ಪಕ್ಕದೂರು ಪಾರು ಮಗ ಸೀನನ್ ಕಾಲ್ ಹಿಡ್ಕಂಡ್ ದುಬಾಯಿಗೆ ಹೋಯಿದ ಅವ ಏಗಳ್ ಬತ್ನೋ?" ಅಂತ ಕಾಳಿಯ ಮುಂದಿದ್ದ ಕಲಗಚ್ಚು ಮರಿಗೆಗೆ ನೀರು ಸುರಿದೆ. ಕಾಳಿ ಸೊರ್ ಸೊರ್ ಅಂತ ನೀರು ಕುಡಿಯುತ್ತಾ ಓರೆ ಕಣ್ಣಿಂದ ನನ್ನ ನೋಡುತ್ತಾ ನನ್ನ ಮಾತನ್ನೇ ಆಲಿಸುತ್ತಿತ್ತು. ನನ್ನ ಮಾತು ಕೇಳಲಿಕ್ಕೆ ಕಾಳಿದನ ಮಾತ್ರ. ದೇಹಗಟ್ಟಿ ಇದ್ದಾಗ ಹಳ್ಳಿಮನೆ ಬೇಕು ಎಂದು ನಾನು ನನ್ನವರು ಕಟ್ಟಿದ ಕನಸಿನರಮನೆ, ಇದು ತೋಟದ ಮಧ್ಯದ ಒಂಟಿ ಮನೆ. ಒಂದರ್ಧ ಮೈಲು ದೂರದಲ್ಲಿ ನಮ್ಮ ದಾಯಾದಿಗಳ ಮನೆ; ಕೂತ್ರೆ–ನಿಂತ್ರೆ ಕಾಲು ಕೆರೆದು ಜಗಳಕ್ಕೆ ಬರೋರು. ಮಗ ವಿಟ್ಟು ಇದ್ದಾಗ ಒಂಟಿ ಅಂತನ್ನಿಸ್ತಿರಲಿಲ್ಲ. ಈಗ ನಾನು, ನನ್ನವರು ಎದುರು ಬದುರು ಕುಳಿತರೂ ಮಾತಿಗೆ ವಿಷಯಗಳಿಲ್ಲ. ನನಗೆ ಮಾತಿಗೆ ಕಾಳಿಯೊಬ್ಬಳೇ. ಕಾಳಿ ನೀರು ಕುಡಿದು ಮುಗಿಸೋವರೆಗೂ ಬೆನ್ನು–ಕುತ್ತಿಗೆ ಸವರುತ್ತಿದ್ದೆ "ಕಾಳಿ, ಯಜಮಾನ್ರಿಗೆ ಕಾಫಿ–ತಿಂಡಿ ಮಾಡಿಕೊಟ್ಟು ಬಂದು ನಿಂಗೆ ಮೇಬಳ್ಳಿ ಹಾಕ್ತೆ ಅಕ್ಕಾ" ಎಂದು ಅವಳಿಂದ ಪರ್ಮಿಷನ್ ತಗೊಂಡು ಪಡಸಾಲೆಗೆ ಬಂದೆ. ಯಜಮಾನ್ರು ಇಷ್ಟರೊಳಗೆ ಎದ್ದು ತೋಟಾನೆಲ್ಲಾ ಒಂದು ಸುತ್ತು ಸುತ್ತಿ ಬರೋರು ಇಂದು ಪಡಸಾಲೆಯ ಮಧ್ಯದಲ್ಲಿ ಮಗ್ಗುಲಾಗಿ ಮಲಗಿದ್ರು 'ಪಾಪ ತುಂಬಾ ಸೆಕೆ ಆಯಿರ್ಕು ಅದಕ್ಕೆ ನೆಲ್ದ ಮೇಲೆ ಬಿದ್ಕಂಡಿರು' ಅಂದು ಕೊಳ್ತಾ "ಹೋಯ್ ಸೂರ್ಯದೇವ್ರು ನೆತ್ತಿ ಮೇಲೆ ಬಪ್ಪೋ ಹೊತ್ತಾಯ್ತು ಏಳುದಿಲ್ಯಾ" ಎಂದು ಭುಜ ಹಿಡಿದು ಅಲ್ಲಾಡಿಸಿದೆ. ನನ್ನನ್ನೇ ನನಗೆ ನಂಬಲಾಗುತ್ತಿಲ್ಲ. ಬಲಗೈಯಲ್ಲಿ ಖಾಲಿಯಾದ ನೀರಿನ ಸೀಸ ಹಿಡಿದಂತೆಯೇ ಇದೆ. ಮೈಯೆಲ್ಲಾ ತಣ್ಣಗಾಗಿದೆ. ನನಗೇನು ಮಾಡಬೇಕು ಅಂತ ಗೊತ್ತಾಗಲಿಲ್ಲ. ಮತ್ತೆ ಮತ್ತೆ ತಟ್ಟಿದೆ, ಅಲ್ಲಾಡಿಸಿದೆ, ಶಕ್ತಿ ಮೀರಿ ಬಡಿದೆ. ನನ್ನವರು ಮಿಸುಕಾಡುತ್ತಿಲ್ಲ. ನನ್ನವರು ನನ್ನ ಪ್ರಪಂಚವಾಗಿದ್ರು ನಾ ನಿಂತ ನೆಲ, ತಲೆ ಮೇಲಿನ ಸೂರು ಎಲ್ಲವೂ ಗಿರಗಿರನೆ ತಿರುಗಿದಂತಾಯ್ತು. ವಿಟ್ಟೂ ವಿಟ್ಟೂ, ಅಂತ ಮಗನನ್ನು ಹಂಬಲಿಸಿದೆ. ನನ್ನನ್ನು ನಾನು ಸಂಭಾಳಿಸಿಕೊಳ್ಳಲೇಬೇಕಿತ್ತು. ನಾನೂ ಕೈಚೆಲ್ಲಿ ಕುಳಿತರೆ? ನಾನು ಕರೆದರೂ ಇಲ್ಲ, ಕೂಗಿದರಿಲ್ಲ, ಕೇಳಿದರೂ ಬರುವಂತಹ ಪುಣ್ಯಾತ್ಮರು ಆಸು–ಪಾಸಿನಲ್ಲಿಲ್ಲ.

ಒಂಟಿಮನೆ ನನ್ನನ್ನೇ ತಿನ್ನುತಿತ್ತು. ಕಾಳಿದನ ಮೇಬಳ್ಳಿ ಹಾಕಿದರೂ, 'ನಮ್ಮ ತೋಟಕ್ಕೆ ಬಂತು' ಎಂದು ಜಗಳಕ್ಕೆ ಬರುತ್ತಿದ್ದ ದಾಯಾದಿಗಳ ನೆನಪಾಯ್ತು. ಕೂಡಲೇ ಕೊಟ್ಟಿಗೆಗೆ ಹೋಗಿ ಕಾಳಿದನವನ್ನು ಕೊಂಡೊಯ್ದು ತೊಡಮೆ ದಾಟಿಸಿ ದಾಯಾದಿಗಳ ತೋಟಕ್ಕೆ ಬಿಟ್ಟು ಬಂದೆ. ನನಗೊತ್ತು ಜಗಳಕ್ಕಾಗಿಯಾದ್ರು ಅವರೆಲ್ಲ ಬರ್ತಾರೆ ಅಂತ.

ಪಡಸಾಲೆಗೆ ಬಂದು ನನ್ನವರ ತಲೆಯನ್ನೆತ್ತಿ ನನ್ನ ತೊಡೆಯ ಮೇಲಿರಿಸಿಕೊಂಡೆ. ನನ್ನ ಸುತ್ತ ಶೂನ್ಯ ಆವರಿಸಿತ್ತು. ನನ್ನವರ ಪ್ರಾಣ ಹೋದಾಗ ನಾನಾದರೂ ಜೊತೆಗಿರುವೆ. ನನ್ನ ಪ್ರಾಣ ಹೋದಾಗ ಯಾರಿಗೂ ಗೊತ್ತೇ ಆಗದು. ಇದ್ದೊಬ್ಬ ಮಗ ಹೊಟ್ಟೆ ಪಾಡಿಗಾಗಿ ವಿದೇಶಕ್ಕೆ ಹೋಗಿದ್ದಾನೆ. ಈಗೀಗ ಕರಾವಳಿಯ ಬದಿಯಲ್ಲಿ ಇದು ಸರ್ವೇ-ಸಾಧಾರಣ. ನಮ್ಮ ದೇಶದ ಮೀಸಲಾತಿಯಿಂದಾಗಿ ಪ್ರತಿಭಾ ಪಲಾಯನವಾಗುತ್ತಿದೆ. ತಂದೆ-ತಾಯಿ ಅನಾಥ ಹೆಣವಾಗುತ್ತಿದ್ದಾರೆ. ಒಂಟಿ ಮನೆ ನನ್ನ ಸುತ್ತ ತಿರುಗುತ್ತಿತ್ತು ಗಿರಗಿರ. ಬೆಳಿಗ್ಗೆ ಎದ್ದಾಗ ನಾನೇ ಹಾಕಿದ್ದ ರೇಡಿಯೋದಿಂದ ಹಾಡು ಬರುತ್ತಿತ್ತು. "ದೂರ ಬೆಟ್ಟದಲ್ಲಿ ಪುಟ್ಟ ಮನೆಯಿರಬೇಕು ಮನೆಯ ಸುತ್ತ ಹೂವ ರಾಶಿ ಹಾಸಿರಬೇಕು" ದುಃಖ ತಡೆಯಲಾಗಲಿಲ್ಲ, ಕಣ್ಣಿಂದ ಜಾರುತ್ತಿದ್ದ ಕಂಬನಿ ನನ್ನವರ ನೆತ್ತಿಯನ್ನು ತೋಯಿಸುತ್ತಿತ್ತು.


## BUNTS' SANGHA - DOCTORS WING

### Free Medical Counseling Centre

**Venue : Bunts Sangha Bangalore**
On Every Sunday Evening
Time: between 3pm to 5pm

Contact: **Smt. Malini Shetty, Bunts Sangha** on
**080-23399323 / 23399635/ 636 between 10 am to 6.00 pm.**

### KIDNEY DIALYSIS TREATMENT

The Bunts Sangha Bangalore through the Doctors Cell wishes to make dialysis available at nominal cost to the members. Bunts Sangha Members requiring kidney dialysis regularly are requested to register with Bunts Sangha with Smt. Malini H. Shetty at Sangha office on **080-23399323 / 23399635/ 636 between 10 am to 6.00 pm.**

## ಬಂಟರ ಸಂಘ – ವೈದ್ಯಕೀಯ ವಿಭಾಗ

### ಉಚಿತ ವೈದ್ಯಕೀಯ ಮಾರ್ಗದರ್ಶನ ಶಿಬಿರ

**ಸ್ಥಳ: ಬಂಟರ ಸಂಘ ಬೆಂಗಳೂರು**
**ಪ್ರತಿ ಭಾನುವಾರ ಸಂಜೆ 3.00ರಿಂದ 5ರತನಕ**

ದೂರವಾಣಿ ಸಂಖ್ಯೆ: 080–23399323/ 23399636 /635– ಶ್ರೀಮತಿ ಮಾಲಿನಿ ಹೆಚ್. ಶೆಟ್ಟಿ

### ಕಿಡ್ನಿ ಡಯಾಲಿಸಿಸ್ ಚಿಕಿತ್ಸೆ

ಸಮಾಜದ ದೀರ್ಘ ಕಾಲದ ಮೂತ್ರ ಜನಕಾಂಗದ ರೋಗಿಗಳಿಗೆ ರಿಯಾಯಿತಿ ದರದಲ್ಲಿ / ಉಚಿತವಾಗಿ ಆಯ್ದ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆ ಒದಗಿಸಲಾಗುವುದು. ಅಗತ್ಯವಿರುವವರು ಸಂಘದ ಕಛೇರಿಯಲ್ಲಿ ಶ್ರೀಮತಿ ಮಾಲಿನಿ ಶೆಟ್ಟಿ ಇವರನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೊಂದಾಯಿಸಬೇಕಾಗಿ ವಿನಂತಿ.

**ಸಮಯ ಬೆಳಿಗ್ಗೆ 10.00 ರಿಂದ ಸಂಜೆ 6.00 ದೂರವಾಣಿ : 080–23399323/ 635 /636**

# ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು

ಹಬ್ಬಗಳು, ಆಚರಣೆಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು – ಕೃಷಿ ಪ್ರಧಾನವಾದ ಬಂಟ ಸಮಾಜದ ಎಲ್ಲಾ ಆಚರಣೆಗಳೂ, ಹಬ್ಬಗಳೂ ಕೃಷಿಗೆ ಸಂಬಂಧಪಟ್ಟವುಗಳೇ ಆಗಿವೆ. ಹಿಂದೆ ಕೂಡು ಕುಟುಂಬಗಳಿದ್ದ ಕಾಲದಲ್ಲಿ ಅತ್ಯಂತ ಸಾಂಪ್ರದಾಯಿಕವಾಗಿ ಆಚರಿಸಲ್ಪಡುತ್ತಿದ್ದ ಹಬ್ಬಗಳ ಸಡಗರ, ಸಂಭ್ರಮ ಕ್ರಮೇಣ ಕ್ಷೀಣಿಸುತ್ತಿದ್ದು ಕೃಷಿಯಂತೆಯೇ ಮರೆಯಾಗುತ್ತಿದೆಯೇನೋ ಎನ್ನುವ ಆತಂಕವಿದೆ. ಹಿರಿಯರಿಗೆ ಗತವೈಭವವನ್ನು ನೆನಪಿಸಿಕೊಳ್ಳಲು ಮತ್ತು ನವಪೀಳಿಗೆಗೆ ನಮ್ಮ ಆಚರಣೆಗಳ ವೈಶಿಷ್ಟ್ಯದ ಸೊಬಗನ್ನು ಮನದಟ್ಟು ಮಾಡುವುದಕ್ಕಾಗಿ ಈ ಅಂಕಣ. ಪ್ರಾದೇಶಿಕ ಹಾಗೂ ಭಾಷಿಕ ಭಿನ್ನತೆಗಳು ಆಚರಣೆಗಳಲ್ಲೂ ಪ್ರತಿಫಲಿಸುತ್ತವಾದ್ದರಿಂದ ಇಲ್ಲಿ ತುಳುನಾಡಿನ ದಕ್ಷಿಣ ಹಾಗೂ ಉತ್ತರ ಭಾಗಗಳ ಸಂಪ್ರದಾಯಗಳನ್ನು ಬೇರೆ ಬೇರೆಯಾಗಿ ಚಿತ್ರಿಸಲಾಗಿದೆ.

**– ಸಂಪಾದಕಿ**

## ಪತ್ತನಾಜೆ

ತುಳು ನಾಡಿನ ಜನಪದರಲ್ಲಿ ಪತ್ತನಾಜೆಯು ಒಂದು ಮಹತ್ವ ಪಡೆದ ದಿವಸವಾಗಿರುತ್ತದೆ. ಎರಡನೆ ತಿಂಗಳು ಬೇಸ್ಯದ ಹತ್ತನೇ ದಿನವೇ ಪತ್ತನಾಜೆ. ಬೇಸಾಯದಲ್ಲಿ ತಾವು ಮಾಡಿರುವ ಸುಗ್ಗಿ ಬೆಳೆಯ ಎಲ್ಲಾ ಕೆಲಸವನ್ನು ಮುಗಿಸಿ (ಒತ್ತರೆ ಮಾಡಿ) ಮುಂದಿನ ಮಳೆಗಾಲದ ಬೇಸಾಯಕ್ಕೆ ಅಣಿಯಾಗುವ ಸೂಚನೆಯು ಸಂಕೇತವೇ "ಪತ್ತನಾಜೆ". ಪತ್ತನಾಜೆಯಲ್ಲಿ ಹಿಂದಿನ ಕಾಲದಲ್ಲಿ ಅಬ್ಬರದ ಮಳೆ ಬಂದು ಭೂಮಿಯು ನೀರಾವರಿಯಾಗಿ ಬೇಸಾಯಕ್ಕೆ ಬಿತ್ತನೆಗೆ, ನಾಟಿ ಮಾಡುವುದಕ್ಕೆ ಅಣಿಯಾಗುವ ಸಂಭ್ರಮವೇ ಪತ್ತನಾಜೆ. ಪತ್ತನಾಜೆಗೆ ಒಂದು ವೇಳೆ ಹವಾಮಾನದ ವೈಪರೀತ್ಯವಾಗಿ ಮಳೆ ಶುರುವಾಗದೇ ಇದ್ದರೂ ಕೂಡಾ "ಪತ್ಪನಿಬರ್ಸ" ಬಂದೇ ಬರುವುದು ಕೂಡಾ ವಾಡಿಕೆಯಾಗಿರುತ್ತದೆ.

ಪತ್ತನಾಜೆಗೆ ಸರ್ವ ಸಾಮಾನ್ಯವಾಗಿ ಭೂತ ಸ್ಥಾನದ ತಂಬಿಲಗಳು, ಕೋಲಗಳು, ವಾರ್ಷಿಕ ಜಾತ್ರೆಗಳು ಮುಗಿಯುತ್ತವೆ. ಈ ದಿನ ಬೆಳಿಗ್ಗೆ ಭೂತ ಸ್ಥಾನಗಳಲ್ಲಿ ತಂಬಿಲದಂತಹ ಆರಾಧನೆ ನಡೆಸಿ ತಾವು ಮನೆಯಿಂದ ತಂದಿರುವ ಕೋಳಿಗಳನ್ನು ಬಲಿ ಕೊಡುವುದು ಸಂಪ್ರದಾಯ. ದೇವಸ್ಥಾನದ ಯಕ್ಷಗಾನದ ವೃತ್ತಿ ಮೇಳಗಳು ಹರಕೆಯಾಟದ ತಿರುಗಾಟದ ಆಟಗಳನ್ನು ಮುಗಿಸಿ ದೇವಸ್ಥಾನಕ್ಕೆ ಬಂದು ಗೆಜ್ಜೆ ಬಿಚ್ಚುವ ದಿವಸ ಪತ್ತನಾಜೆ. ಪತ್ತನಾಜೆಗೆ ಗೆಜ್ಜೆ ಬಿಚ್ಚಿದರೆ ಮತ್ತೆ ಗೆಜ್ಜೆ ಕಟ್ಟುವುದು ಮಾರ್ನೆಮಿ (ಮಹಾನವಮಿ) ಹಬ್ಬದಂದು.

ಬೇಸ್ಯ ತಿಂಗಳ ಪತ್ತನಾಜೆಯನ್ನು (ಮೇ 25) ನಾವು ಸ್ವಾಗತಿಸೋಣ. ಈ ವರ್ಷ ವರುಣ ದೇವರು ಕೃಪೆ–ದೋರಿ ಒಳ್ಳೆ ಮಳೆ ಬಂದು ಇಳೆಯು ಸಸ್ಯ ಶ್ಯಾಮಲೆಯಾಗಿ, ಉತ್ತಮೋತ್ತಮ ಕೃಷಿಯಾಗಿ ದೇಶ ಸಂಭ್ರಮಿಸಲೆಂದು ಸರ್ವರೂ ಹಾರೈಸೋಣ.

**ಸೀತಾರಾಮ ಶೆಟ್ಟಿ, ಮಾಣೂರು**

# ಹತ್ರೋದಿ

ಕುಂದಾಪುರದ ಕಡೆಯಲ್ಲಿ ಯುಗಾದಿ ಮುಗಿದ ಹತ್ತನೇ ದಿನವನ್ನು ಹತ್ರೋದಿ ಎಂದು ಆಚರಿಸುತ್ತಾರೆ. ಆ ದಿನ ಬೆಳಿಗ್ಗೆ ಬೀಜ ಮುಹೂರ್ತ ಮಾಡಿ, ಕೃಷಿಗೆ ಚಾಲನೆ ನೀಡಲಾಗುತ್ತದೆ ಮತ್ತು ಸೂರ್ಯ ಮೇಲೇರುವ ಸಮಯದಲ್ಲಿ ಸುಣ್ಣ ಹೊಯ್ಯುತ್ತಾರೆ.

ಮನೆಯ ಮುತ್ತೈದೆ ತುಳಸಿ ಕಟ್ಟೆಯ ಹತ್ತಿರ ಸೆಗಣಿ ಸಾರಿಸಿ, ರಂಗೋಲಿ ಬರೆದು, ಒಂದು ಮಣ್ಣಿನ ಕೊಡದಲ್ಲಿ ಸುಣ್ಣ ಹಾಕಿ ಅದಕ್ಕೆ ನೀರೆರೆದು, ದೂಪದಿಂದ ಆರತಿ ಮಾಡುತ್ತಾರೆ. ಇದಕ್ಕೆ ಸುಣ್ಣ ಹೊಯ್ಯುವುದು ಎನ್ನುತ್ತಾರೆ.

"ಚಿನ್ನವಿಲ್ಲದ ಮನೆಯಲ್ಲಿಯೂ ಸುಣ್ಣವಿರಲೇ ಬೇಕು" ಎನ್ನುವುದು ಹಿಂದಿನವರ ನಂಬಿಕೆ. ಆ ದಿನ ಮಧ್ಯಾಹ್ನ ಊಟಕ್ಕೆ ಹತ್ತು ಬಗೆಯ ತರಕಾರಿಗಳನ್ನು ಹಾಕಿ ಪದಾರ್ಥ ಮಾಡುತ್ತಾರೆ.

ಹತ್ರೋದಿ ದಿನವನ್ನು ಆಚರಿಸುತ್ತಿದ್ದರು ಎನ್ನುವುದು ಈಗ ಇತಿಹಾಸ. ಇತ್ತೀಚಿನ ವರ್ಷಗಳಲ್ಲಿ ಈ ಎಲ್ಲಾ ಆಚರಣೆಗಳು ಕಾಣಲು ಸಿಗುತ್ತಿಲ್ಲ. ಕೃಷಿ ಪ್ರಧಾನವಾದ ಬಂಟ ಕುಟುಂಬದಲ್ಲಿ ಈಗ ಹಲವಾರು ಕಾರಣಗಳಿಂದ ಕೃಷಿಗೆ ಪ್ರಾಧಾನ್ಯತೆ ಕಡಿಮೆಯಾಗಿದೆ. ಅದರಿಂದಾಗಿ ಕೃಷಿಗೆ ಸಂಬಂಧಪಟ್ಟ ಈ ಎಲ್ಲಾ ಆಚರಣೆಗಳು ಅರ್ಥ ಕಳೆದುಕೊಂಡಿವೆ. ಸಾಗುವಳಿ ಮಾಡದವರು ಬೀಜ ಮುಹೂರ್ತ ಮಾಡುವ ಅಗತ್ಯವಿಲ್ಲ. ಆದ್ದರಿಂದ ಹಿಂದಿನ ಅನೇಕ ಕಟ್ಟು-ಪಾಡುಗಳು, ಆಚಾರ-ವಿಚಾರಗಳು ಈಗ ಇತಿಹಾಸದ ಪುಟ ಸೇರುತ್ತಿವೆ.

# ವಸಂತ


ಕುಂದಾಪುರದ ಹೆಚ್ಚಿನ ಹಳ್ಳಿಗಳಲ್ಲಿ ವರ್ಷಕ್ಕೊಮ್ಮೆ ತುಳಸಿ ಕಟ್ಟೆಯಲ್ಲಿ "ವಸಂತ" ಎನ್ನುವ ಒಂದು ವಿಶೇಷ ಪೂಜೆಯನ್ನು ನಡೆಸುತ್ತಾರೆ. ಇದನ್ನು ಹೆಚ್ಚಾಗಿ ಎಪ್ರಿಲ್ ಅಥವಾ ಮೇ ತಿಂಗಳಿನಲ್ಲಿ ಮಾಡುತ್ತಾರೆ. ಇದು ತಿರುಪತಿಯ ದೇವರಿಗೆ ಸಲ್ಲಿಸುವ ಪೂಜೆ-ಯಾಗಿರುವುದರಿಂದ ಹೆಚ್ಚಾಗಿ ಶನಿವಾರವೇ ನಡೆಯುತ್ತದೆ. ನಮ್ಮ ಹಿರಿಯರಿಗೆ ಪ್ರತಿ ವರ್ಷವೂ ತಿರುಪತಿಗೆ ಹೋಗಲು ಸಾಧ್ಯವಾಗದ ಕಾರಣ ತಿರುಪತಿಯ ದೇವರನ್ನು ವರ್ಷಕ್ಕೊಮ್ಮೆ ತುಳಸಿ ಕಟ್ಟೆಯಲ್ಲಿ ಆಹ್ವಾನಿಸಿ ಪೂಜಿಸುವುದು ಈ ವಸಂತದ ಹಿನ್ನೆಲೆ ಎಂದು ಹಲವರ ನಂಬಿಕೆ.

ಅಂಗಳ ಮತ್ತು ತುಳಸಿ ಕಟ್ಟೆಯನ್ನು ಶುಚಿಗೊಳಿಸಿ ರಂಗೋಲಿ ಬರೆದು ಎರಡು ಕಳಸಗಳನ್ನಿಟ್ಟು ಅದನ್ನು ಹೂವಿನಿಂದ ಅಲಂಕರಿಸಿ ನಡುವಿನಲ್ಲಿ ಬಾಳೆ ಎಲೆಯಲ್ಲಿ ಅಕ್ಕಿ, ತೆಂಗಿನಕಾಯಿ ಇಟ್ಟು ಬಗೆಬಗೆಯ ಹೂವುಗಳಿಂದ ಶೃಂಗರಿಸಿ, ಹೊಸ ಫಲವಾದ ಮಾವು, ಹಲಸು ಮತ್ತು ಇತರ ಹಣ್ಣುಗಳ ನೈವೇದ್ಯ ಇಡುತ್ತಾರೆ. ದೀಪ-ಧೂಪದೊಂದಿಗೆ ಪಾನಕ-ಪಂಚ ಕಜ್ಜಾಯವನ್ನು ತಯಾರಿಸುತ್ತಾರೆ. ಮುಖ್ಯವಾಗಿ ತಿರುಪತಿ ದೇವರ ಹುಂಡಿಯನ್ನಿಟ್ಟು ಆ ಹುಂಡಿಗೆ ಭಕ್ತಿಯಿಂದ ಕಾಣಿಕೆಯನ್ನು ಅರ್ಪಿಸುತ್ತಾರೆ ಹಾಗೂ ಕುಟುಂಬದ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸುತ್ತಾ ಶಂಖ, ಜಾಗಟೆ ನಾದಗಳೊಂದಿಗೆ ದೇವರಿಗೆ ಆರತಿ ಮಾಡುತ್ತಾರೆ. ಮನೆಯ ಮಹಿಳೆಯರೆಲ್ಲರೂ ತೆಂಗಿನಕಾಯಿ ಒಡೆದು ತುಳಸಿಗೆ ಪ್ರದಕ್ಷಿಣೆ ಹಾಕುತ್ತಾರೆ. ಪೂಜಾರಿಯು ತಿರುಪತಿಯ ತಿಮ್ಮಪ್ಪ ದೇವರನ್ನು ಬೇರೆ ಬೇರೆ ಹೆಸರುಗಳಿಂದ ಹೊಗಳಿ ಕರೆಯುತ್ತಾನೆ. ಆಗ ಉಳಿದವರೆಲ್ಲಾ ಭಕ್ತಿಯಿಂದ ಜೋರಾಗಿ ಗೋವಿಂದಾ ಗೋವಿಂದಾ ಎಂದು ಕೂಗಿ ಕರೆಯುತ್ತಾರೆ. ಆಗ ಆ ಪರಿಸರದಲ್ಲಿ ನಿಜವಾಗಿಯೂ ವೈಕುಂಠಪತಿ ಓಡೋಡಿ ಬರುವನೇನೋ ಎನ್ನುವಂತೆ ಭಾಸವಾಗುತ್ತದೆ. ಒಂದು ಸಕಾರಾತ್ಮಕ ಶಕ್ತಿಯ ಸಂಚಾರವಾಗುತ್ತದೆ. ಕೆಲವೊಮ್ಮೆ ತುಳಸೀ ಕಟ್ಟೆಯಿಂದ ಪ್ರಸಾದ ರೂಪದಲ್ಲಿ ಹೂ ಕೆಳಗೆ ಬೀಳುತ್ತದೆ.


ನಂತರ ಕಳಸ, ದೀಪಗಳನ್ನು ಮನೆಯ ಒಳಗೆ ತೆಗೆದುಕೊಂಡು ಹೋಗಿ ದೇವರ ಕೋಣೆಯಲ್ಲಿಟ್ಟು ಅಲ್ಲಿ ಆರತಿ ಮಾಡುತ್ತಾರೆ. ಮಧ್ಯಾಹ್ನದ ಊಟಕ್ಕೆ ವಸಂತಕ್ಕೆ ಉಪಯೋಗಿಸಿದ ಅಕ್ಕಿ ಮತ್ತು ತೆಂಗಿನಕಾಯಿಯಿಂದ ಪಾಯಸ ಮಾಡಿ ಎಲ್ಲರಿಗೂ ಹಂಚಿ ಖುಷಿ ಪಡುತ್ತಾರೆ.


**- ನಿರ್ಮಲ ಸಿ. ರೈ**


# ATTENSION PARENTS, GRAND PARENTS, UNCLES & AUNTS




## CHILDREN'S STORY BOOK IN 3 VOLUMES WITH COLOUR ILLUSTRATIONS




If you buy all the 3 volumes at a time you get a discount of Rs.200 and a container box-free

**Where you can buy these volumes from-**

Directly from the Author / Publisher - Contact 9341252320, Ph : 080-23491765, 23323443
From the Bunts Sangha Bengaluru- Office Ph : 080-23399323, 23399635

For Online Shopping, Logon to www.creativdok.com www.amazon.in

ADVT.


brides of india
Many Celebrations, One India.
KANNADA BRIDE
RAJAJINAGAR | KORAMANGALA | DICKENSON ROAD
JAYANAGAR | MARATHAHALLI | PHOENIX MARKETCITY
MALABAR
GOLD & DIAMONDS
CELEBRATE THE BEAUTY OF LIFE

ADVT.

**BUNTS' SANGHA RNS EVENING COLLEGE**

(Recognized by the Government of Karnataka,
Affiliated to Bangalore University)
No. 324, Bunts' Complex, Chord Road,
Vijayanagar, Bengaluru - 560 040

# ADMISSION OPEN

## 2019-2020

Experienced and Qualified Faculties

Timings: 5.30 pm to 8.30 pm

## Course Offered

# B.Com

(3 years Full time Semester Schemes)

Contact No: 080 2339 8922, 094827 17935
Website: www.bsrnsv.org
Email: principalrnsec@gmail.com

BCC
Adding Life with Healing Rays

# ಬೆಂಗಳೂರು ಕ್ಯಾನ್ಸರ್ ಆಸ್ಪತ್ರೆ

# BENGALURU CANCER CENTRE

No. 118/1, Mookambika Temple Road, Machohalli gate, Magadi Main Road,
Bengaluru-560091, Mob: 8971865658 Ph: 080-28536767


## ಕ್ಯಾನ್ಸರ್‌ಗೆ ಉಚಿತ ಚಿಕಿತ್ಸೆ

## Free Treatment For Cancer

**Under the following Schemes**

- Arogya Karnataka Scheme( BPL & Ration Card )
- Ayushman Bharath Scheme
- ESI
- Tamilnadu Chief Minister Scheme
- Low Cost Treatment For Other Insurance Scheme

**Facilities** Radiotherapy | Chemotherapy | Cancer Surgery | Pain & Palliative Care





**Dr. Anil Kumar M.R**
MBBS, MD-RT,DNB-RT
CEO & Consultant
Radiation oncologist

**Contact: +91 97398 08502, 89718 65658**



BCC
Adding Life with Healing Rays

# ಬೆಂಗಳೂರು ಕ್ಯಾನ್ಸರ್ ಆಸ್ಪತ್ರೆ

# BENGALURU CANCER CENTRE

No. 118/1, Mookambika Temple Road, Machohalli gate, Magadi Main Road,
Bengaluru-560091, Mob: 8971865658 Ph: 080-28536767


## ಕ್ಯಾನ್ಸರ್‌ಗೆ ಉಚಿತ ಚಿಕಿತ್ಸೆ

## Free Treatment For Cancer

**Facilities** Radiotherapy | Chemotherapy | Cancer Surgery | Pain & Palliative Care






**Dr. Anil Kumar M.R**
MBBS, MD-RT,DNB-RT
CEO & Consultant
Radiation oncologist


* terms & Conditions apply

**Contact: +91 97398 08502, 89718 65658**

ADVT.

# SSNMC SUPER SPECIALTY HOSPITAL

## Clinical Centres of Excellence

